# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಮೇ 09, 2021

ಸಂಪುಟ : 47 ಸಂಚಿಕೆ : 356 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಕೊರೊನಾ ಅಬ್ಬರಿಸಿದರೂ ಸಿಗದ ಲಸಿಕೆ

ಬೆಂಗಳೂರು, ಮೇ 8- ಒಂದೆಡೆ ರಾಜ್ಯದಲ್ಲಿ ಕೊರೊನಾ ಸೋಂಕಿನ ಅಬ್ಬರ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಮತ್ತೊಂದೆಡೆ ಲಸಿಕಾ ಕೇಂದ್ರದ ಬಳಿ ನೋ ಸ್ಟಾಕ್ (ಖಾಲಿಯಾಗಿದೆ) ನಾಳೆ ಬನ್ನಿ ಎಂಬ ಸಿದ್ಧ ಉತ್ತರ ಎದುರಾಗುತ್ತಿದೆ.

ಲಸಿಕೆ ಹಾಕಿಸಿಕೊಳ್ಳಲು ಮೊದಲು ಹಿಂಜರಿದ ಜನರು ಈಗ ಕೊರೊನಾ ಲಸಿಕೆ ಪಡೆಯಲು ಮುಗಿಬೀಳುತ್ತಿದ್ದಾರೆ.

ಆದರೆ, ಲಸಿಕಾ ಕೇಂದ್ರಗಳಲ್ಲಿ ಡೋಸ್ ಕೊರತೆ ಕಂಡು ಬಂದಿದ್ದು, ಸ್ಟಾಕ್ ಇಲ್ಲ ಎಂಬ ಉತ್ತರ ಸಿಗುತ್ತಿದೆ. ರಾಜ್ಯದಲ್ಲಿ 60 ವರ್ಷ ವಯೋಮಾನದವರು 35.64 ಲಕ್ಷ ಜನರು ಮೊದಲ ಡೋಸ್ ಹಾಕಿಸಿಕೊಂಡಿದ್ದು, ಇದರ ಪೈಕಿ 8.23 ಲಕ್ಷ ಜನ ಮಾತ್ರ ಎರಡನೇ ಡೋಸ್ ಹಾಕಿಸಿಕೊಂಡಿದ್ದಾರೆ.

44ರಿಂದ 59ರ ವಯೋಮಾನದ 36.38 ಲಕ್ಷ ಜನರು ಈಗಾಗಲೇ ಮೊದಲ ಡೋಸ್ ಹಾಕಿಸಿಕೊಂಡಿದ್ದು, ಅವರಲ್ಲಿ 3.16 ಲಕ್ಷ ಜನ ಮಾತ್ರ ಎರಡನೇ ಡೋಸ್ ಪಡೆದುಕೊಂಡಿದ್ದಾರೆ. ಈವರೆಗೆ ರಾಜ್ಯದಲ್ಲಿ ಸುಮಾರು 1 ಕೋಟಿ ಜನ ಕೊರೊನಾ ಲಸಿಕೆ ಪಡೆದಿದ್ದಾರೆ.

### ಎರಡನೇ ಡೋಸ್ ಪಡೆಯುವವರಿಗೆ ಪರದಾಟ

ಎರಡನೇ ಡೋಸ್ ಪಡೆಯಬೇಕಿದ್ದವರಿಗೂ ಕೂಡ ಸಮಸ್ಯೆ ಉಂಟಾಗಿದೆ. ಕೋವ್ಯಾಕ್ಸಿನ್ ಮೊದಲ ಡೋಸ್ ಪಡೆದವರು 28 ದಿನಗಳ ನಂತರ ಎರಡನೇ ಡೋಸ್, ಕೋವಿಶೀಲ್ಡ್ ಮೊದಲ ಡೋಸ್ ಪಡೆದವರು 6 ವಾರಗಳ ನಂತರ ಎರಡನೇ ಡೋಸ್ (5ನೇ ಪುಟಕ್ಕೆ)

### ಕೋವ್ಯಾಕ್ಸಿನ್‌ಗಾಗಿ ಲಸಿಕೆ ಕೇಂದ್ರದಲ್ಲಿ ಜನಜಂಗುಳಿ

ದಾವಣಗೆರೆ, ಮೇ 8 - ಕೋವ್ಯಾಕ್ಸಿನ್ ಲಸಿಕೆ ವಿತರಿಸುತ್ತಿದ್ದ ನಗರದ ಸಿ.ಜಿ. ಆಸ್ಪತ್ರೆ ಆವರಣದಲ್ಲಿರುವ ಕೇಂದ್ರದಲ್ಲಿ ಶನಿವಾರ ಬೆಳಿಗ್ಗೆ ಗೊಂದಲದ ಪರಿಸ್ಥಿತಿ ಉಂಟಾಗಿತ್ತು.

ಸಿ.ಜಿ. ಆಸ್ಪತ್ರೆಯಲ್ಲಿ ಕೋವ್ಯಾಕ್ಸಿನ್ ಲಸಿಕೆ ಸಿಗಲಿದೆ ಎಂಬ ಆಸೆಯಿಂದ ನೂರಾರು ಜನರು ಬಂದಿದ್ದರು. ಆದರೆ, ಕೇವಲ 150 ಜನರಿಗೆ ಮಾತ್ರ ಇಲ್ಲಿ ಲಸಿಕೆ ಸಿಗಲಿದೆ ಎಂದು ತಿಳಿದ ಜನರು ನಿರಾಶರಾದರು.

ಪತ್ರಿಕೆಗಳಲ್ಲಿ ಇಷ್ಟು ಪ್ರಮಾಣದ ಲಸಿಕೆ ನೀಡಲಾಗುವುದು ಎಂದು ಮೊದಲೇ ತಿಳಿಸಬೇಕಿತ್ತು ಎಂದು ಕೆಲವರು ಹೇಳಿದರು, (5ನೇ ಪುಟಕ್ಕೆ)

## ಆಸ್ಪತ್ರೆಗೆ ದಾಖಲಾಗಲು ಕೊರೊನಾ ಪಾಸಿಟಿವ್ ಕಡ್ಡಾಯವಲ್ಲ

ನವದೆಹಲಿ, ಮೇ 8 - ಆಸ್ಪತ್ರೆಗೆ ದಾಖಲಾಗಲು ಕೊರೊನಾ ಪರೀಕ್ಷೆಯಲ್ಲಿ ಪಾಸಿಟಿವ್ ಬರುವುದು ಕಡ್ಡಾಯವಲ್ಲ ಎಂದು ರಾಜ್ಯಗಳಿಗೆ ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ.

ಕೊರೊನಾ ರೋಗಿಗಳು ಸಾರ್ವಜನಿಕ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗಲು ಇರುವ ರಾಷ್ಟ್ರೀಯ ನೀತಿಯನ್ನು ಬದಲಿಸಿರುವ ಕೇಂದ್ರ ಆರೋಗ್ಯ ಸಚಿವಾಲಯ, ಯಾವುದೇ ರೋಗಿಗೆ ಯಾವುದೇ ಕಾರಣಕ್ಕೆ ಚಿಕಿತ್ಸೆ ನಿರಾಕರಿಸಬಾರದು. ರೋಗಿ ಬೇರೆ ನಗರಕ್ಕೆ ಸೇರಿದರೂ ಸಹ ಅವರಿಗೆ ಆಕ್ಸಿಜನ್ ಹಾಗೂ ಅಗತ್ಯ ಔಷಧಿ ನಿರಾಕರಿಸಬಾರದು (5ನೇ ಪುಟಕ್ಕೆ)

## ರಾಜ್ಯದಲ್ಲಿ 54,841 ಜನರಿಗೆ ಕೊರೊನಾ

ಬೆಂಗಳೂರು, ಮೇ 8 – ಶನಿವಾರ ರಾಜ್ಯದಲ್ಲಿ ಒಂದೇ ದಿನ 54,841 ಕೊರೊನಾ ಸೋಂಕಿತರು ಕಾಣಿಸಿಕೊಂಡಿದ್ದು, 482 ಜನ ಸಾವನ್ನಪ್ಪಿದ್ದಾರೆ.

ಇದೇ ದಿನ 34,881 ಜನರು ಕೊರೊನಾದಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಬೆಂಗಳೂರು ನಗರ ಒಂದರಲ್ಲೇ 21,534 ಸೋಂಕಿತರು ಕಂಡುಬಂದಿದ್ದು, 285 ಜನ ಸಾವನ್ನಪ್ಪಿದ್ದಾರೆ.


## ಹೆಚ್ಕೆಆರ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಹಿರಿಯ ಹೋರಾಟಗಾರರು, ಬದುಕಿನ ಕೊನೆಯವರೆಗೂ ಗಾಂಭೀರ್ಯದ ಪ್ರತೀಕದಂತೆ ಬದುಕಿದ, ಬದುಕಿದ್ದಾಗಲೇ ನಮ್ಮೆಲ್ಲರಿಗೂ ದಂತ ಕಥೆಯಾಗಿದ್ದ **ಶ್ರೀಯುತ ಹೆಚ್.ಕೆ. ರಾಮಚಂದ್ರಪ್ಪ** ಅವರು ದಿನಾಂಕ 8.5.2021ರ ಶನಿವಾರ ನಮ್ಮನ್ನೆಲ್ಲಾ ಅಗಲಿದ್ದು ವಿವರಿಸಲಾಗದ ವ್ಯಥೆಯಾಗಿದೆ. ಬದ್ಧತೆಗಳನ್ನು ಬದಿಗೊತ್ತದೇ ರಾಜೀ ರಹಿತ ಮತ್ತು ಕೊನೆವರೆಗೂ ಶ್ರಮಿಕರ, ದೀನ - ದಲಿತರ, ಪರವಾದ ಹೋರಾಟದಲ್ಲಿ ಅಗ್ರ ಗಣ್ಯ ನಾಯಕರಾಗಿ ಈ ಇಳಿ ವಯಸ್ಸಿನಲ್ಲೂ ನಮ್ಮಂತವರಿಗೆ ಪ್ರೇರಣಾ ಶಕ್ತಿಯಂತಿದ್ದ ರಾಮಚಂದ್ರಪ್ಪನವರಿಗೆ ಭಾರವಾದ ಹೃದಯದಿಂದ ಅವರ ಆತ್ಮಕ್ಕೆ ಶಾಂತಿ ಕೋರುತ್ತಿದ್ದೇನೆ.

**ಲಾಲ್ ಸಲಾಂ ಕಾಮ್ರೇಡ್**

**ಡಿ.ಬಿ. ಪ್ರವೀಣ್ ಶಾಮನೂರು**


## ಕೊರೊನಾ : ಸುಪ್ರೀಂನಿಂದ 12 ಸದಸ್ಯರ ಕಾರ್ಯಪಡೆ

ನವದೆಹಲಿ, ಮೇ 8 – ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ರಾಜ್ಯಗಳಿಗೆ ಆಕ್ಸಿಜನ್ ಹಂಚುವ ಸಲುವಾಗಿ ಹಾಗೂ ಕೊರೊನಾ ಸಮಯದಲ್ಲಿ (5ನೇ ಪುಟಕ್ಕೆ)


**ಜಮೀನು ಮಾರಾಟಕ್ಕಿದೆ**

ಹಿರೇಮೇಗಳಗೆರೆ ಸಮೀಪದಲ್ಲಿ 5.53 ಮತ್ತು 6.55 ಎಕರೆ ಕಾರ್ನರ್ ಒಟ್ಟು ವಿಸ್ತೀರ್ಣ 12.08 ಎಕರೆ, ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮಿಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.

ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409


## ಕಳಚಿದ ಕಮ್ಯುನಿಸ್ಟ್ ಪಕ್ಷದ ಹಳೆಯ ತಲೆಮಾರಿನ ಕೊಂಡಿ



ಹೆಚ್ಕೆಆರ್ ಇನ್ನಿಲ್ಲ

ದಾವಣಗೆರೆ,ಮೇ 8- ಮಧ್ಯ ಕರ್ನಾಟಕದ ಕಾರ್ಮಿಕ ಚಳುವಳಿಯ ಮುಂಚೂಣಿ ನಾಯಕ ಮತ್ತು ಕಮ್ಯುನಿಸ್ಟ್ ಪಕ್ಷದ ಧುರೀಣ ಕಾಂ. ಹೆಚ್.ಕೆ. ರಾಮಚಂದ್ರಪ್ಪ ಅವರು ಇಂದು ಸಂಜೆ ಅಕಾಲಿಕವಾಗಿ ನಿಧನರಾದರು.

ಮೃತರಿಗೆ ಸುಮಾರು 78 ವರ್ಷ ವಯಸ್ಸಾಗಿತ್ತು. ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಆರೈಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 9ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ನಗರದ ಆರ್.ಹೆಚ್. ಬೃಂದಾವನದಲ್ಲಿ ನಡೆಯಲಿದೆ.

**ಸಂಕ್ಷಿಪ್ತ ಪರಿಚಯ** : 1960ರ ದಶಕದಲ್ಲಿ ಚಂದ್ರೋದಯ ಮಿಲ್ ಕಾರ್ಮಿಕರಾಗಿ ತಮ್ಮ ಬದುಕನ್ನು ಆರಂಭಿಸಿದ ರಾಮಚಂದ್ರಪ್ಪ, 1970ರ ದಶಕದಲ್ಲಿ ನಡೆದ ಮಿಲ್ ಕಾರ್ಮಿಕರೊಬ್ಬರ ಸಾವಿನ ಪ್ರಕರಣ ವನ್ನು ಖಂಡಿಸಿ ನಡೆಸಿದ ಪ್ರತಿಭಟನೆಯು ಅವರನ್ನು ಕಾರ್ಮಿಕ ಮುಖಂಡರನ್ನಾಗಿ ರೂಪಿಸಲು ಕಾರಣವಾಯಿತು.

ಅಂದಿನ ಕಾರ್ಮಿಕ ಮುಖಂಡರುಗಳಾಗಿದ್ದ ದಿ. ಕಾಂ. ಸುರೇಶ್, ದಿ. ಕಾಂ. ಶೇಖರಪ್ಪ, ದಿ. ಕಾಂ. ಪಂಪಾಪತಿ, ದಿ. ಕಾಂ. ಎಂ.ಜಿ. ತಿಪ್ಪೇಸ್ವಾಮಿ ಮತ್ತಿತರರೊಂದಿಗೆ ಹೆಚ್ಕೆಆರ್ ಶ್ರಮಿಕ ವರ್ಗದ ನಾಯಕರಾಗಿ ಮುಂದುವರೆದಿದ್ದರು. ಅವರೊಂದಿಗಿದ್ದ ಪಂಪಾಪತಿ ಮತ್ತಿತರರು ಅಗಲಿಕೆಯ ನಂತರದ ದಿನಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಮತ್ತು ಕಾರ್ಮಿಕ ಚಳುವಳಿಯ ಮೊದಲ ಸಾಲಿನ ಏಕೈಕ ನಾಯಕರಾಗಿ ಉಳಿದಿದ್ದರು. ಅವರ (2ನೇ ಪುಟಕ್ಕೆ)


॥ ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು ॥ ॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ॥

**ಗುರು-ಲಿಂಗ-ಜಂಗಮಾರಾಧನೆಯ ಆಹ್ವಾನ**

ದಾವಣಗೆರೆ ಸಿಟಿ ವಾಸಿ
**ಶ್ರೀಮತಿ ನಿರ್ಮಲದೇವಿ ಮತ್ತು ಶ್ರೀ ಕೆ.ಎಂ. ಶಿವಲಿಂಗಸ್ವಾಮಿ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 05.05.2021 ನೇ ಬುಧವಾರ ಬೆಳಗಿನಜಾವ 3.30ಕ್ಕೆ ನಮ್ಮ ಮಗನಾದ
**ಶ್ರೀ ಶಿವಪ್ರಸಾದ್ ಕುರುಡಿಮಠ**
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ




ಜನನ : 12.02.1991 ನಿಧನ : 06.05.2021

'ಗುರು-ಲಿಂಗ-ಜಂಗಮಾರಾಧನೆ'ಯನ್ನು ದಿನಾಂಕ 09.05.2021 ನೇ ಭಾನುವಾರ ಬೆಳಿಗ್ಗೆ 10 ಕ್ಕೆ, ಮೃತರ ಸ್ವಗೃಹ, ಶಿವಕುಮಾರಸ್ವಾಮಿ ಬಡಾವಣೆ, ಸಂಜೀವಿನಿ ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ಏರ್ಪಡಿಸಿದ್ದೇವೆ. ತಾವುಗಳು ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ನಿರ್ಮಲದೇವಿ ಮತ್ತು ಶ್ರೀ ಕೆ.ಎಂ. ಶಿವಲಿಂಗಸ್ವಾಮಿ
ಶ್ರೀಮತಿ ಶಿಲ್ಪಶ್ರೀ ಮತ್ತು ಯೋಗೇಶ್
ಮೊ. : 87222 85558, 99860 26866, 76766 15313



## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 08.05.2021ರಂದು ನಿಧನರಾದ
ದಾವಣಗೆರೆ ನಗರಸಭೆ ಮಾಜಿ ಅಧ್ಯಕ್ಷರೂ, ಹಿರಿಯ ಕಾರ್ಮಿಕ ಮುಖಂಡರೂ,
ಕಮ್ಯೂನಿಸ್ಟ್ ಪಕ್ಷದ ಹಿರಿಯ ನಾಯಕರೂ, ದಾವಣಗೆರೆ ಜಿಲ್ಲಾ ಎಐಟಿಯುಸಿ ಕಾರ್ಯದರ್ಶಿಗಳೂ,
ನಾಯಕ ವಿದ್ಯಾರ್ಥಿ ನಿಲಯದ ಗೌರವ ಅಧ್ಯಕ್ಷರೂ,
ವಾಲ್ಮೀಕಿ ನಾಯಕ ಸಮಾಜದ ಹಿರಿಯ ಮುಖಂಡರೂ, ಮಾರ್ಗದರ್ಶಕರೂ ಆಗಿದ್ದ

**ಕಾಂ॥ ಹೆಚ್. ಕೆ. ರಾಮಚಂದ್ರಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ
ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಶ್ರೀ ಶ್ರೀ ಶ್ರೀ ಜಗದ್ಗುರು ಪ್ರಸನ್ನಾನಂದಪುರಿ ಮಹಾಸ್ವಾಮೀಜಿ,**
ವಾಲ್ಮೀಕಿ ಗುರುಪೀಠ, ರಾಜನಹಳ್ಳಿ.

**ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಹಾಗೂ ಸರ್ವ ಸದಸ್ಯರು**

- ನಾಯಕ ವಿದ್ಯಾರ್ಥಿ ನಿಲಯ ದಾವಣಗೆರೆ
- ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕ
- ದಾವಣಗೆರೆ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ
- ಸರ್ಕಾರಿ ಪರಿಶಿಷ್ಟ ಪಂಗಡ ನೌಕರರ ಜಿಲ್ಲಾ ಘಟಕ, ದಾವಣಗೆರೆ ಜಿಲ್ಲೆ
- ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಮಹಿಳಾ ಸಮಾಜ



www.narayanahealth.org



ಎಸ್.ಎಸ್.ನಾರಾಯಣ ಹಾರ್ಟ್ ಸೆಂಟರ್, ದಾವಣಗೆರೆ

**ಮಧ್ಯಕರ್ನಾಟಕದಲ್ಲಿ 9ನೇ ವಸಂತಕ್ಕೆ ಯಶಸ್ವಿ ಪಾದಾರ್ಪಣೆ**

ಅತ್ಯಾಧುನಿಕ ಹೃದಯರೋಗ ಆಸ್ಪತ್ರೆ

- 1ಲಕ್ಷಕ್ಕೂ ಅಧಿಕ ಹೃದ್ರೋಗಿಗಳಿಗೆ ಚಿಕಿತ್ಸೆ ಒದಗಿಸಿಲಾಗಿದೆ
- 15 ಸಾವಿರಕ್ಕೂ ಅಧಿಕ ಕ್ಯಾಥ್‌ಲ್ಯಾಬಾ ಪ್ರೊಸೀಜರ್‌ಗಳು
- 2000ಕ್ಕೂ ಅಧಿಕ ತೆರೆದ ಹೃದಯ ಶಸ್ತ್ರಚಿಕಿತ್ಸೆಗಳು
- ಅನುಭವಿ ವೈದ್ಯರುಗಳ ತಂಡ

95385 89633    186-0208-0208

ಜ್ಞಾನ ಶಂಕರ, ಪೋಸ್ಟ್ ಬಾಕ್ಸ್ ನಂ–1, ಎನ್.ಹೆಚ್–4, ಬೈಪಾಸ್ ರಸ್ತೆ, ದಾವಣಗೆರೆ

# ಜಿಂದಾಲ್‌ಗೆ ಜಮೀನು : ಬಿಜೆಪಿಯಲ್ಲೇ ಅಪಸ್ವರ

ಬೆಂಗಳೂರು, ಮೇ 8- ಬಳ್ಳಾರಿಯ ಜಿಂದಾಲ್ ಉಕ್ಕು ಕಂಪನಿಗೆ ಕಡಿಮೆ ದರಕ್ಕೆ ಭೂಮಿ ಲೀಸ್‌ಗೆ ನೀಡಿದ ಸರ್ಕಾರದ ಕ್ರಮಕ್ಕೆ ಬಿಜೆಪಿಯಲ್ಲೇ ಅಪಸ್ವರ ಎದ್ದಿದೆ.

ನಿಷ್ಠ ಬಿಜೆಪಿ ಶಾಸಕರಿಂದ ಸರ್ಕಾರದ ಈ ನಿರ್ಧಾರಕ್ಕೆ ವಿರೋಧ ವ್ಯಕ್ತವಾಗಿದೆ. ಈ ಸಂಬಂಧ ಮುಖ್ಯಮಂತ್ರಿ ಯಡಿಯೂರಪ್ಪಗೆ ನಿಷ್ಠ ಶಾಸಕರು ಪತ್ರ ಬರೆದು ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ. ಬಸನಗೌಡ ಪಾಟೀಲ್ ಯತ್ನಾಳ್, ಅರವಿಂದ ಬೆಲ್ಲದ, ಪೂರ್ಣಿಮಾ ಶ್ರೀನಿವಾಸ್, ಉದಯ್ ಗರುಡಾಚಾರ್ ಅವರು ಸಿಎಂಗೆ ಪತ್ರ ಬರೆದು ಜಿಂದಾಲ್‌ಗೆ ಭೂಮಿ ಪರಭಾರೆ ಮಾಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಜಿಂದಾಲ್‌ಗೆ 3667 ಎಕರೆ ಭೂಮಿ ಶುದ್ಧ ಕ್ರಯಪತ್ರ ಮಾಡಿ ಕೊಟ್ಟ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಪತ್ರದಲ್ಲಿ ಒತ್ತಾಯಿಸಿದ್ದಾರೆ. ಸಾವಿರಾರು ಕೋಟಿ ಬೆಲೆ ಬಾಳುವ ಭೂಮಿಯನ್ನು ಕೇವಲ 60 ರಿಂದ 70 ಕೋಟಿ ರೂ.ಗೆ ಶುದ್ಧ ಕ್ರಯಪತ್ರ ಮಾಡಿಕೊಟ್ಟಿದ್ದು ಸರಿಯಲ್ಲ.

ಮೈತ್ರಿ ಸರ್ಕಾರದಲ್ಲೂ ಇದೇ ನಿರ್ಧಾರ ಕೈಗೊಂಡಾಗ ಬಿಜೆಪಿ ಮುಖಂಡರು ನಿಮ್ಮ ನೇತೃತ್ವದಲ್ಲಿ ಅಹೋರಾತ್ರಿ ಹೋರಾಟ ನಡೆಸಿದ್ದೆವು. ನೀವೇ ಮೈತ್ರಿ ಸರ್ಕಾರದ ವಿರುದ್ಧ ಕಿಕ್‌ಬ್ಯಾಕ್ ಆರೋಪ ಮಾಡಿದ್ದಿರಿ. ಈಗ ನಮ್ಮ ಸರ್ಕಾರದಲ್ಲಿ ಅದೇ ತಪ್ಪು ಮಾಡಿದ್ದು ಸರಿಯಲ್ಲ ಎಂದಿದ್ದಾರೆ.

ಜಿಂದಾಲ್‌ಗೆ ಭೂಮಿ ಕೊಟ್ಟ ವಿಚಾರವನ್ನು ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಬಹುದಿತ್ತು. ಶಾಸಕಾಂಗ ಪಕ್ಷದ ಸಭೆಯಲ್ಲಿ ಅಥವಾ ಬಜೆಟ್ ಅಧಿವೇಶನ ಸಂದರ್ಭದಲ್ಲಾದರೂ ಚರ್ಚಿಸಬಹುದಿತ್ತು. ಮತ್ತೊಮ್ಮೆ ಸಂಪುಟ ಸಭೆಯಲ್ಲಿ ಕೈಗೊಂಡ ಈ ನಿರ್ಧಾರದ ಮರುಪರಿಶೀಲನೆ ಅಗತ್ಯವಿದೆ. ಪಕ್ಷದ ವೇದಿಕೆಯಲ್ಲಿ ಚರ್ಚೆಗೆ ಮತ್ತೊಮ್ಮೆ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದ್ದಾರೆ.

ಸರ್ಕಾರ ಈ ನಿರ್ಧಾರ ತೆಗೆದುಕೊಂಡ ನಂತರ ಸಾರ್ವಜನಿಕ ವಲಯದಲ್ಲಿ ಈ ಬಗ್ಗೆ ವ್ಯಾಪಕ ಟೀಕೆ ವ್ಯಕ್ತವಾಗುತ್ತಿದೆ. ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಸರ್ಕಾರ ಈ ನಿರ್ಧಾರ ತೆಗೆದುಕೊಳ್ಳುವ ಅನಿವಾರ್ಯತೆ ಇತ್ತೇ? ಪ್ರತಿ ಎಕರೆಗೆ ಎಷ್ಟು ಲಕ್ಷ ರೂ. ನಿಗದಿ ಮಾಡಿ ಮಾರಾಟ ಪ್ರಕ್ರಿಯೆ ನಡೆಸಲಾಗಿದೆ. ಇದೆಲ್ಲವೂ ಅನುಮಾನ ಮೂಡಿಸುವ ವಿಚಾರವಲ್ಲವೇ?, ಮೈತ್ರಿ ಸರ್ಕಾರದಲ್ಲಿ ನಡೆದಂತೆ ಈಗಲೂ ಕಿಕ್‌ಬ್ಯಾಕ್ ವ್ಯವಹಾರ ನಡೆದಿದೆಯೇ ಎಂದು ಸಾರ್ವಜನಿಕರು ಹಾಗೂ ಮಾಧ್ಯಮ ಪ್ರತಿನಿಧಿಗಳು ಈಗ ಬಿಜೆಪಿಯ ಶಾಸಕರನ್ನು ಪ್ರಶ್ನಿಸುವ ವಾತಾವರಣ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಹೀಗಾಗಿ ರಾಜ್ಯ ಸರ್ಕಾರ ಈ ನಿರ್ಧಾರದ ಬಗ್ಗೆ ಪುನರ್ ಪರಿಶೀಲನೆ ನಡೆಸುವುದು ಅತ್ಯಂತ ಸೂಕ್ತ ಹಾಗೂ ಅನಿವಾರ್ಯವಾಗಿದೆ.

ಹೀಗಾಗಿ ಹಿಂದಿನ ಸಂಪುಟ ಸಭೆಯಲ್ಲಿ ತೆಗೆದುಕೊಂಡ ಈ ನಿರ್ಧಾರಕ್ಕೆ ಘಟನೋತ್ತರ ಅನುಮೋದನೆ ನೀಡದೇ ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಕೈ ಬಿಡುವುದು ಸೂಕ್ತ ಎಂದು ಒತ್ತಾಯಿಸುತ್ತೇವೆ. ಜತೆಗೆ ಈ ಬಗ್ಗೆ ಪಕ್ಷದ ವೇದಿಕೆಯಲ್ಲಿ ಮತ್ತೊಮ್ಮೆ ಚರ್ಚೆ ನಡೆಸುವುದಕ್ಕೆ ಅವಕಾಶ ಕಲ್ಪಿಸಬೇಕೆಂದು ಪತ್ರದ ಮೂಲಕ ಮನವಿ ಮಾಡಿಕೊಂಡಿದ್ದಾರೆ.

# ಹೆಚ್‌ಕೆಆರ್ ನಿಧನಕ್ಕೆ ಸಂತಾಪ



**ಹರಿಹರ**

ಹರಿಹರ, ಮೇ 8- ಕಾರ್ಮಿಕ ಮುಖಂಡರಾದ ಹೆಚ್.ಕೆ. ರಾಮಚಂದ್ರಪ್ಪ ನವರ ನಿಧನಕ್ಕೆ ನಗರದಲ್ಲಿ ಹಲವಾರು ಸಂಘಟನೆಯ ಮುಖಂಡರು ಸಂತಾಪ ಸೂಚಿಸಿದ್ದಾರೆ.

ಈ ವೇಳೆ ಮುಖಂಡರು ಮಾತನಾಡಿ, ರಾಮಚಂದ್ರಪ್ಪ ಕಮ್ಯುನಿಸ್ಟ್ ಪಕ್ಷದಲ್ಲಿ ಕಳೆದ 50 ವರ್ಷಗಳಿಂದ ತಮ್ಮ ಸಿದ್ಧಾಂತಕ್ಕೆ ಬದ್ಧರಾಗಿ ಬಡವರ ಒಳಿತಿಗಾಗಿ ಶ್ರಮಿಸಿದವರು. ದಾವಣಗೆರೆ ನಗರಸಭೆ ಅಧ್ಯಕ್ಷರಾಗಿ ನಗರಕ್ಕೆ ಅದ್ಭುತ ಕೆಲಸ ಮಾಡಿ ದುಡಿದವರು. ಹಲವಾರು ಸಂಘಟನೆ ಗಳಲ್ಲಿ ಮುಖಂಡರಾಗಿ ತೊಡಗಿಸಿಕೊಂಡು ಬಡವರ ಕಷ್ಟ ಗಳಿಗೆ ಸ್ಪಂದಿಸುವ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ ಎಂದರು. ಕಳೆದ ಜನವರಿಯಲ್ಲಿ ಹರಿಹರ ತಾಲ್ಲೂಕಿನ ರೈತ ಸಂಘ, ಪ್ರಗತಿಪರ ಎಲ್ಲಾ ಸಂಘಟನೆಗಳು, ಬಂಡಾಯ ಸಾಹಿತ್ಯ ಸಂಘಟನೆ ಸೇರಿ ನಾಡಿನ ರೈತರ ಹೋರಾಟಕ್ಕೆ ಬೆಂಬಲಿಸಿ ಒಂದು ದಿನದ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಾಗ ಹರಿಹರ ನಗರಕ್ಕೆ ಆಗಮಿಸಿ, ದೇಶದ ರೈತರ ಹೋರಾಟ ಹಾಗೂ ಕರಾಳ ಕಾನೂನುಗಳ ವಿರುದ್ಧ ಮಾತನಾಡಿ, ಹೋರಾಟಕ್ಕೆ ಬೆಂಬಲ ಸೂಚಿಸಿದ್ದರು. ಹಲವಾರು ಬಾರಿ ನಗರದಲ್ಲಿ ಬಿಸಿ ಊಟ ತಯಾರಕರ ಸಂಘದ ಪರವಾಗಿ ಪ್ರತಿಭಟನೆ ಮತ್ತು ಅಂಗನವಾಡಿ ಕಾರ್ಯಕರ್ತರು ಮಾಡುವ ಪ್ರತಿಯೊಂದು ಪ್ರತಿಭಟನೆಯ ನೇತೃತ್ವವನ್ನು ವಹಿಸಿಕೊಂಡು ತಮ್ಮದೇ ಆದ ದಾಟಿಯಲ್ಲಿ ಮಾತನಾಡಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದರು ಎಂದು ಅವರು ಸ್ಮರಿಸಿದ್ದಾರೆ.

## ಆಕ್ಸಿಜನ್ ಟ್ಯಾಂಕರ್‌ಗಳಿಗೆ ಹೆದ್ದಾರಿ ಸುಂಕ ವಿನಾಯಿತಿ

ನವದೆಹಲಿ, ಮೇ 8 – ವೈದ್ಯಕೀಯ ಆಕ್ಸಿಜನ್ ಸಾಗಿಸುವ ಟ್ಯಾಂಕರ್‌ಗಳು ಹಾಗೂ ಕಂಟೈನರ್‌ಗಳಿಗೆ ಹೆದ್ದಾರಿ ಸುಂಕದ ವಿನಾಯಿತಿ ನೀಡಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆದೇಶ ಹೊರಡಿಸಿದೆ.

ವೈದ್ಯಕೀಯ ಆಕ್ಸಿಜನ್‌ಗೆ ದೇಶಾ ದ್ಯಂತ ಬೇಡಿಕೆ ಹೆಚ್ಚಾಗಿರುವುದನ್ನು ಪರಿಗಣಿಸಿ, ಆಂಬ್ಯೂಲೆನ್ಸ್ ರೀತಿಯ ತುರ್ತು ವಾಹನಗಳಂತೆ ಆಕ್ಸಿಜನ್ ವಾಹನಗಳನ್ನು ಪರಿಗಣಿಸಲು ನಿರ್ಧರಿಸಲಾಗಿದೆ. 2 ತಿಂಗಳವರೆಗೆ ಈ ವಿನಾಯಿತಿ ಲಭ್ಯವಿರಲಿದೆ ಎಂದು ಪ್ರಾಧಿಕಾರ ಹೇಳಿದೆ.

## ರಾಮೇಶ್ವರದಲ್ಲಿ 40 ಪಾಸಿಟಿವ್

ದಾವಣಗೆರೆ, ಮೇ 8 - ನ್ಯಾಮತಿ ತಾಲ್ಲೂಕಿನ ರಾಮೇಶ್ವರಹಳ್ಳಿಯಲ್ಲಿ ನಿನ್ನೆಯಿಂದ ನಡೆಸಲಾದ ಕೊರೊನಾ ರ್‍ಯಾಪಿಡ್ ಟೆಸ್ಟ್‌ಗಳಲ್ಲಿ 40 ಜನರಿಗೆ ಪಾಸಿಟಿವ್ ಇರುವುದು ಕಂಡು ಬಂದಿದೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ. ರಾಘವನ್ ತಿಳಿಸಿದ್ದಾರೆ. ನಂತರದಲ್ಲಿ 361 ಆರ್.ಟಿ.-ಪಿ.ಸಿ.ಆರ್. ಪರೀಕ್ಷೆಗಳನ್ನು ನಡೆಸಲಾಗಿದ್ದು, ಇವುಗಳನ್ನು ಲ್ಯಾಬ್‌ಗಳಿಗೆ ಕಳಿಸಲಾಗಿದೆ ಎಂದವರು ಹೇಳಿದ್ದಾರೆ.

ಈ ಟೆಸ್ಟ್‌ಗಳ ಫಲಿತಾಂಶದ ಆಧಾರದ ಮೇಲೆ ಕಂಟೈನ್‌ಮೆಂಟ್ ವಲಯ ರಚಿಸುವ ಕುರಿತು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ. ರಾಮೇಶ್ವರದಲ್ಲಿ ಗಂಡ – ಹೆಂಡತಿ ಕೊರೊನಾ ಸೋಂಕಿನಿಂದ ಮೃತಪಟ್ಟಿದ್ದಾರೆ ಎಂದು ಶಾಸಕ ಎಂ.ಪಿ. ರೇಣುಕಾಚಾರ್ಯ ತಿಳಿಸಿದ್ದಾರೆ.

## ತಲೆಮಾರಿನ ಕಳಚಿದ ಕೊಂಡಿ

**(1ನೇ ಪುಟದಿಂದ)** ಅವರ ನಿಧನದಿಂದಾಗಿ ಕಾರ್ಮಿಕ ಚಳುವಳಿ ಹಾಗೂ ಕಮ್ಯುನಿಸ್ಟ್ ಪಕ್ಷದ ಹಳೆಯ ತಲೆಮಾರಿನ ಕೊಂಡಿಯೊಂದು ಕಳಚಿದಂತಾಗಿದೆ.

ಕಾರ್ಮಿಕ ಚಳುವಳಿಯಲ್ಲಿ ನಡೆದ ಪ್ರಕರಣವೊಂದಕ್ಕೆ ಸಂಬಂಧಪಟ್ಟಂತೆ ಜೈಲು ವಾಸ ಅನುಭವಿಸಿದ್ದರು. ಕಮ್ಯುನಿಸ್ಟ್ ಪಕ್ಷದಲ್ಲಿ ಕಳೆದ 50 ವರ್ಷಗಳಿಂದ ತಮ್ಮ ಸಿದ್ಧಾಂತಕ್ಕೆ ಬದ್ಧರಾಗಿ ಬಡವರ ಒಳಿತಿಗಾಗಿ ಶ್ರಮಿಸುತ್ತಿದ್ದರು. ಸರಳ ವ್ಯಕ್ತಿತ್ವದ ಅವರು ತಮ್ಮ ಬಿಳಿಯ ಬಟ್ಟೆಯೊಡನೆ ಹೆಗಲ ಮೇಲೆ ಹಾಕಿಕೊಳ್ಳುತ್ತಿದ್ದ ಕೆಂಪು ಶಾಲು ಅವರ ವಿಚಾರಧಾರೆಯ ದ್ಯೋತಕವಾಗಿತ್ತು.

ದಾವಣಗೆರೆ ನಗರಸಭೆ ಸದಸ್ಯರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ನಗರಸಭೆ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದರು. ಹಲವಾರು ಸಮಾಜಗಳನ್ನು ಮುಂಚೂಣಿಗೆ ತರುವ ನಿಟ್ಟಿನಲ್ಲಿ ನಗರಸಭೆಯಿಂದ ನಿವೇಶನಗಳನ್ನು ಮಂಜೂರು ಮಾಡಿದ್ದರು.

ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಎಐಟಿಯುಸಿ ಕಾರ್ಯದರ್ಶಿಯಾಗಿ, ರಾಜ್ಯ ಘಟಕದ ಸಹ ಕಾರ್ಯದರ್ಶಿಯಾಗಿ, ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕರ ಫೆಡರೇಷನ್ ರಾಜ್ಯಾಧ್ಯಕ್ಷರಾಗಿ, ಬಿಸಿಯೂಟ ತಯಾರಕರ ಫೆಡರೇಷನ್ ರಾಜ್ಯ ಗೌರವ ಕಾರ್ಯದರ್ಶಿಯಾಗಿ ಮತ್ತು ಇತರೆ ಹಲವಾರು ಕಾರ್ಮಿಕ ಸಂಘಟನೆಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುವುದರ ಮೂಲಕ ಶೋಷಿತ ವರ್ಗದ ಪರ ಧ್ವನಿಯಾಗಿದ್ದರು.

ಕಮ್ಯುನಿಸ್ಟ್ ಪಕ್ಷಕ್ಕೆ ಮತ್ತೊಂದು ಹೆಸರೇ ಹೆಚ್.ಕೆ. ರಾಮಚಂದ್ರಪ್ಪ ಎನ್ನುವಂತಾಗಿದ್ದರು. ನಾಯಕ ಸಮಾಜದ ಹಿರಿಯ ಮುಖಂಡರೂ ಆಗಿದ್ದ ಅವರು, ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷರಾಗಿ ಹಲವಾರು ದೇವಸ್ಥಾನಗಳ ಅಭಿವೃದ್ಧಿ ಸಮಿತಿಗಳ ಅಧ್ಯಕ್ಷರೂ ಆಗಿದ್ದರು.

## 180 ಜಿಲ್ಲೆಗಳಲ್ಲಿ ವಾರದಿಂದ ಸೋಂಕಿಲ್ಲ

ನವದೆಹಲಿ, ಮೇ 8 – ದೇಶದ 180 ಜಿಲ್ಲೆಗಳಲ್ಲಿ ಕಳೆದ 1 ವಾರದಿಂದ ಮತ್ತೆ ಕೊರೊನಾ ಸೋಂಕು ಕಾಣಿಸಿ ಕೊಂಡಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ ತಿಳಿಸಿದ್ದಾರೆ. ಆನ್‌ಲೈನ್ ಮೂಲಕ ರಾಜ್ಯಗಳ ಸಚಿವರ ಜೊತೆ ಸಭೆ ನಡೆಸಿದ ಅವರು, 18 ಜಿಲ್ಲೆಗಳಲ್ಲಿ ಕಳೆದ 14 ದಿನಗಳಿಂದ ಹಾಗೂ 54 ಜಿಲ್ಲೆಗಳಲ್ಲಿ ಕಳೆದ 21 ದಿನಗಳಿಂದ ಮತ್ತು 32 ಜಿಲ್ಲೆಗಳಲ್ಲಿ ಕಳೆದ 28 ದಿನಗಳಿಂದ ಯಾವುದೇ ಹೊಸ ಸೋಂಕು ಬಂದಿಲ್ಲ ಎಂದು ತಿಳಿಸಿದ್ದಾರೆ. ದೇಶದಲ್ಲೀಗ 9 ಲಕ್ಷ ಜನರು ಆಕ್ಸಿಜನ್ ಬೆಡ್‌ಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 4.88 ಲಕ್ಷ ಜನ ಐ.ಸಿ.ಯು.ನಲ್ಲಿದ್ದಾರೆ ಹಾಗೂ 1.70 ಲಕ್ಷ ಜನ ವೆಂಟಿಲೇಟರ್‌ಗಳಲ್ಲಿದ್ದಾರೆ ಎಂದೂ ಅವರು ಹೇಳಿದ್ದಾರೆ.


# ಹೆಚ್ಕೆಆರ್ ನಿಧನಕ್ಕೆ ಶ್ರೀ ಪಂಡಿತಾರಾಧ್ಯರು, ಶ್ರೀ ಬಸವ ಪ್ರಭು ಸ್ವಾಮೀಜಿ ಶೋಕ

ದಾವಣಗೆರೆ,ಮೇ 8- ಹಿರಿಯ ಕಾರ್ಮಿಕ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ ಅವರ ನಿಧನಕ್ಕೆ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ, ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಶೋಕ ವ್ಯಕ್ತಪಡಿಸಿದ್ದಾರೆ.

ಮಾಜಿ ಶಾಸಕ ಯಜಮಾನ್ ಮೋತಿ ವೀರಣ್ಣ, ಹಿರಿಯ ಲೆಕ್ಕ ಪರಿಶೋಧಕ ಅಥಣಿ ವೀರಣ್ಣ, ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ, ಬಿಜೆಪಿ ಹಿರಿಯ ಮುಖಂಡ ಎನ್.ಜಿ. ಪುಟ್ಟಸ್ವಾಮಿ, ಜಿಲ್ಲಾ ವೀರಶೈವ ಮಹಾಸಭಾದ ಅಧ್ಯಕ್ಷ ದೇವರಮನೆ ಶಿವಕುಮಾರ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಜಿಲ್ಲಾ ಅಕ್ಕಿ ಗಿರಣಿ ಮಾಲೀಕರ ಸಂಘದ ಅಧ್ಯಕ್ಷ ಎಸ್.ಎಸ್. ಬಕ್ಕೇಶ್, ಕಾರ್ಯದರ್ಶಿ ಕೋಗುಂಡಿ ಬಕ್ಕೇಶಪ್ಪ, ಜಿಲ್ಲಾ ಕಸಾಪ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ, ಹಿರಿಯ ಪತ್ರಕರ್ತ ಕೆ. ಚಂದ್ರಣ್ಣ, ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ಗೌರವ ಕಾರ್ಯದರ್ಶಿಗಳಾದ ಬಿ.ದಿಳ್ಳೆಪ್ಪ, ಎನ್.ಎಸ್. ರಾಜು, ತಾಲ್ಲೂಕು ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ, ನಗರಪಾಲಿಕೆ ಸದಸ್ಯ ಬಿ.ಜಿ. ಅಜಯ್ ಕುಮಾರ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ.ಬಾವಿ, ನಗರಸಭೆ ಮಾಜಿ ಅಧ್ಯಕ್ಷ ಎಂ. ಭೈರಪ್ಪ, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ವೀರಶೈವ ಸಮಾಜದ ಮುಖಂಡರುಗಳಾದ ಜೆ. ಸೋಮನಾಥ್, ಕೆ.ಬಿ. ನಾಗರಾಜ್, ಹಿರಿಯ ವಕೀಲ ಎಲ್. ಹೆಚ್. ಅರುಣ್ ಕುಮಾರ್, ಬಿಜೆಪಿ ಮುಖಂಡ ಅಜ್ಜಂಪುರ ಶೆಟ್ರು ಮೃತ್ಯುಂಜಯ, ರೈತ ಮುಖಂಡ ಎಲ್.ಹೆಚ್. ಅರುಣ್ ಕುಮಾರ್, ನಗರಪಾಲಿಕೆ ಪೌರ ಸೇವಾ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್, ಗಾಂಧಿನಗರದ ಡಾ. ಬಿ.ಆರ್. ಅಂಬೇಡ್ಕರ್ ಸಂಘದ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ, ಪೌರ ಕಾರ್ಮಿಕರ ಮುಖಂಡ ಎನ್. ನೀಲಗಿರಿಯಪ್ಪ, ಹಿರಿಯ ರಂಗಭೂಮಿ ಕಲಾವಿದ ಕೆ. ವೀರಯ್ಯ ಸ್ವಾಮಿ, ಶಿವಸೈನ್ಯ ಯುವಕರ ಸಂಘದ ಗೌರವ ಅಧ್ಯಕ್ಷ ಶಶಿಧರ್ ಹೆಮ್ಮನಬೇತೂರು, ಶ್ರೀ ಸಂಚಾರಿ ಕೆಬಿಆರ್ ಡ್ರಾಮಾ ಕಂಪನಿ ಮಾಲೀಕ ಚಿಂದೋಡಿ ಶಂಭು ಲಿಂಗಪ್ಪ, ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ, ಕಕ್ಕರಗೊಳ್ಳ ಕೆ.ಬಿ. ಪರಮೇಶ್ವರಪ್ಪ, ಹಳೇಪೇಟೆ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಧರ್ಮದರ್ಶಿ ಕೋಡಬಾಳ್ ಚನ್ನಬಸಪ್ಪ ಮತ್ತಿತರರು ಸಂತಾಪ ವ್ಯಕ್ತಪಡಿಸಿದ್ದಾರೆ.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 08.05.2021ರಂದು ಅಕಾಲಿಕವಾಗಿ ನಿಧನರಾದ
ದಾವಣಗೆರೆ ನಗರಸಭೆ ಮಾಜಿ ಅಧ್ಯಕ್ಷರೂ,
ಕಾರ್ಮಿಕ ಚಳುವಳಿಯ ಹಿರಿಯ ಚೇತನ,
ಕಮ್ಯೂನಿಸ್ಟ್ ಪಕ್ಷದ ಹಿರಿಯ ನಾಯಕರೂ,
ನನ್ನ ರಾಜಕೀಯ ಗುರುಗಳೂ ಆಗಿದ್ದ

**ಕಾಂ|| ಹೆಚ್. ಕೆ. ರಾಮಚಂದ್ರಪ್ಪ**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ
ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ
ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಭೈರಪ್ಪ**
**ಮಾಜಿ ಅಧ್ಯಕ್ಷರು, ನಗರಸಭೆ, ದಾವಣಗೆರೆ.**
**ಮತ್ತು ಕುಟುಂಬ ವರ್ಗದವರು**



## ಎಸ್. ಶಿವಗಂಗಾ ನಿಧನ



**ದಾವಣಗೆರೆ ತರಳಬಾಳು ಬಡಾವಣೆ ಮಾಗನೂರು ಬಸಪ್ಪನವರ ಮೈದಾನದ ಹತ್ತಿರದ ವಾಸಿ, ಮುರುಘರಾಜೇಂದ್ರ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಪ್ರಕಾಶ್ ಆರ್.ಡಿ. ಅವರ ಧರ್ಮಪತ್ನಿ**


**ಶ್ರೀಮತಿ ಎಸ್. ಶಿವಗಂಗಾ**

**ಅವರು ದಿನಾಂಕ 08.05.2021ರ ಶನಿವಾರ ರಾತ್ರಿ 9.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಓರ್ವ ಪುತ್ರಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 09.05.2021ರ ಭಾನುವಾರ ಬೆಳಿಗ್ಗೆ 11.30 ಕ್ಕೆ ಗಾಂಧಿನಗರ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.**

**- ದುಃಖತಪ್ತ ಕುಟುಂಬ ವರ್ಗ**
**ಮೊ. : 89700 11644, 88927 55052**



## ಏಕಬೋಟೆ ಗಂಗಾಧರಪ್ಪ ನಿಧನ



ದಾವಣಗೆರೆಯ ವಿನೋಬನಗರ, 1ನೇ ಮೇನ್, 12ನೇ ಕ್ರಾಸ್ ವಾಸಿ ಏಕಬೋಟೆ ಗಂಗಾಧರಪ್ಪ (83) ಅವರು ದಿನಾಂಕ : 08.05.2021 ರಂದು ಮಧ್ಯಾಹ್ನ 1.15ಕ್ಕೆ ನಿಧನರಾಗಿರುತ್ತಾರೆ. ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 09.05.2021 ರಂದು ಬೆಳಿಗ್ಗೆ 10.00 ಗಂಟೆಗೆ ಅಂತಿಮ ಸಂಸ್ಕಾರ ವೈಕುಂಠ ಧಾಮ ಹರಿಹರ ರಸ್ತೆ, ದಾವಣಗೆರೆಯಲ್ಲಿ ನೆರವೇರಿಸಲಾಗುವುದು.



## ಬಾವಿಹಾಳ್ ಉಜ್ಜೋಳರ ಕಮಲಮ್ಮ ನಿಧನ



ದಾವಣಗೆರೆ ತಾಲ್ಲೂಕು ಬಾವಿಹಾಳ್ ವಾಸಿ ದಿ|| ಉಜ್ಜೋಳರ ಸೋಮಶೇಖರಪ್ಪನವರ ಪತ್ನಿ ಶ್ರೀಮತಿ ಕಮಲಮ್ಮ (85) ಅವರು ದಿನಾಂಕ 8.5.2021ರ ಶನಿವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರು. ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.5.2021ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ತಾಲ್ಲೂಕು ಬಾವಿಹಾಳ್ ಗ್ರಾಮದಲ್ಲಿ ನೆರವೇರಲಿದೆ.



## ಶಾಮನೂರಿನ ಮಾಗೋಡು ಶ್ರೀಮತಿ ರುದ್ರಮ್ಮ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ ದಿ. ಮಾಗೋಡು ಹನುಮಂತಪ್ಪನವರ ಧರ್ಮಪತ್ನಿ ಶ್ರೀಮತಿ ರುದ್ರಮ್ಮ (87) ಅವರು ದಿನಾಂಕ 8.5.2021ರ ಶನಿವಾರ ಸಂಜೆ 5.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಸೊಸೆಯಂದಿರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.5.2021ರ ಭಾನುವಾರ ಬೆಳಿಗ್ಗೆ 10 ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.


## ಕೋರ್ಟ್‌ಗಳು ಕಾರ್ಯ ನಿರ್ವಹಿಸುತ್ತಿವೆ : ಎಸ್ಪಿ

ದಾವಣಗೆರೆ, ಮೇ 8 - ದಿನಾಂಕ 8.5.2021ರಂದು ಪ್ರಕಟವಾದ ವರದಿಯಲ್ಲಿ 'ಕೋರ್ಟ್‌ಗಳು ಬಂದ್, ಜೈಲಲ್ಲೂ ಜಾಗವಿಲ್ಲ' ಎಂದು ಪ್ರಕಟಿಸಲಾಗಿತ್ತು. ಆದರೆ, ಈ ವಿಷಯವನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ತಿಳಿಸಿದ್ದಾರೆ. ಕೋರ್ಟ್ ಮತ್ತು ಜೈಲುಗಳು ಕಾರ್ಯ ನಿರ್ವಹಿಸುತ್ತಿವೆ. ಕೋವಿಡ್ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡುವ ವ್ಯಕ್ತಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದವರು ಹೇಳಿದ್ದಾರೆ.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 08.05.2021ರಂದು ನಿಧನರಾದ
**ಶ್ರೀ ಜಿ.ಎಸ್. ರಂಗನಾಥ ದಾಗಿನಕಟ್ಟೆ,** ವಕೀಲರು,
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ
ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ
ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಶಿವ ಮೆಡಿಕಲ್ ಗ್ರೂಪ್ ಮತ್ತು ಸ್ನೇಹಿತರು**




## ಭಾವಪೂರ್ಣ ಶ್ರದ್ಧಾಂಜಲಿ

**ನಮ್ಮ ಕುಟುಂಬದ ಹಿತೈಷಿಗಳೂ,
ನನ್ನ ತಂದೆಯವರ ಆತ್ಮೀಯರೂ,
ನನಗೂ ಮಾರ್ಗದರ್ಶಕರೂ ಆಗಿದ್ದ
ಕ್ರಾಂತಿಕಾರಿ ಹೋರಾಟಗಾರ**

**ಶ್ರೀ ಎಚ್.ಕೆ. ರಾಮಚಂದ್ರಪ್ಪ**


**ಅವರು ನಮ್ಮನ್ನು ಅಗಲಿದ್ದಾರೆ.
ಇವರ ಆತ್ಮಕ್ಕೆ ಶಾಂತಿ ಸಿಗಲೆಂದು
ಮತ್ತು ಕುಟುಂಬದವರಿಗೆ ಇವರ
ಅಗಲಿಕೆಯ ದುಃಖವನ್ನು
ಭರಿಸುವ ಶಕ್ತಿ ಭಗವಂತ
ಸಾಯಿಬಾಬಾರವರು ಕೊಡಲಿ
ಎಂದು ಪ್ರಾರ್ಥಿಸುತ್ತಾ
ಆತ್ಮಶಾಂತಿ ಕೋರುತ್ತೇವೆ.**



✦ **ಯಜಮಾನ್ ಮೋತಿ ವೀರಣ್ಣ**
**ಮಾಜಿ ಶಾಸಕರು ದಾವಣಗೆರೆ**
✦ **ಯಜಮಾನ್ ಮೋತಿ ರಾಜೇಂದ್ರ**
**ನಿರ್ಮಾಪಕರು ಮತ್ತು ಡೆವಲಪರ್**



## ವೈ.ಹೆಚ್. ರೇವಣಸಿದ್ದಪ್ಪ ನಿಧನ



ದಾವಣಗೆರೆ ಎಸ್.ಓ.ಜಿ. ಕಾಲೋನಿ ವಾಸಿ, ಆಟೋ ಡ್ರೈವರ್ ವೈ.ಹೆಚ್. ರೇವಣಸಿದ್ದಪ್ಪ (52) ಅವರು ದಿನಾಂಕ 8.05.2021 ರಂದು ಶನಿವಾರ ಮಧ್ಯಾಹ್ನ 2.30ಕ್ಕೆ ನಿಧನರಾಗಿದ್ದಾರೆ. ಪತ್ನಿ, ಮೂವರು ಪುತ್ರಿಯರು, ನಾಲ್ವರು ಸಹೋದರರು, ಇಬ್ಬರು ಸಹೋದರಿಯರು, ಮಾವಂದಿರು ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 8.05.2021 ರ ಶನಿವಾರ ಹೈಟೆಕ್ ಆಸ್ಪತ್ರೆಯ ಹಿಂಭಾಗ ರುದ್ರಭೂಮಿಯಲ್ಲಿ ನೆರವೇರಿತು.




## ರಂಗನಾಥರಾವ್ ಪವಾರ್ ನಿಧನ



ದಾವಣಗೆರೆ ಚಂದ್ರಮೌಳೇಶ್ವರ ದೇವಸ್ಥಾನದ ರಸ್ತೆ, ಶಿವಾಜಿನಗರ ವಾಸಿ ದಿ. ಸಿದ್ದೋಜಿರಾವ್ ಇವರ ಪುತ್ರ, ಖಾಸಗಿ ಬಸ್ ಏಜೆಂಟರಾದ ರಂಗನಾಥರಾವ್ ಪವಾರ್ (ರಂಗ ಬಿ.ಬಿ) ಅವರು ದಿನಾಂಕ 8.05.2021 ರಂದು ಶನಿವಾರ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.05.2021 ರ ಸಂಜೆ ವೈಕುಂಠಧಾಮದಲ್ಲಿ ನೆರವೇರಿತು.



## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 08.05.2021ರಂದು ಅಕಾಲಿಕವಾಗಿ ನಿಧನರಾದ
ದಾವಣಗೆರೆ ನಗರಸಭೆ ಮಾಜಿ ಅಧ್ಯಕ್ಷರೂ,
ಹಿರಿಯ ಕಾರ್ಮಿಕ ಮುಖಂಡರೂ,
ಕಮ್ಯೂನಿಸ್ಟ್ ಪಕ್ಷದ ಹಿರಿಯ ನಾಯಕರೂ ಆದ

**ಕಾಂ|| ಹೆಚ್. ಕೆ. ರಾಮಚಂದ್ರಪ್ಪ**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ
ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ
ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಶ್ರೀ ಎಸ್. ನಿಜಲಿಂಗಪ್ಪ**
**ಸ್ನೇಹ ಬಳಗ, ದಾವಣಗೆರೆ.**




## ಭಾವಪೂರ್ಣ ಶ್ರದ್ಧಾಂಜಲಿ

**ದಿನಾಂಕ 08.05.2021ರಂದು ನಿಧನರಾದ
ಹಿರಿಯ ಕಾರ್ಮಿಕ ಮುಖಂಡರೂ,
ಕಮ್ಯೂನಿಸ್ಟ್ ಪಕ್ಷದ ಹಿರಿಯ ನಾಯಕರೂ,
ದುಡಿಯುವ ವರ್ಗದ ನೇತಾರರೂ,
ದಾವಣಗೆರೆ ಜಿಲ್ಲಾ ಬ್ಯಾಂಕ್ ನೌಕರರ
ಸಂಘದ ಮಾರ್ಗದರ್ಶಕರೂ ಆದ**

**ಕಾಂ|| ಹೆಚ್. ಕೆ. ರಾಮಚಂದ್ರಪ್ಪ**

**ಅವರಿಗೆ ಗೌರವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ
ಹಾಗೂ ಅವರ ಅಗಲಿಕೆಯ ದುಃಖ ಭರಿಸುವ
ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ
ಎಂದು ಪ್ರಾರ್ಥಿಸುತ್ತೇವೆ.**



AIBEA
**ಅಧ್ಯಕ್ಷರು, ಪ್ರದಾನ ಕಾರ್ಯದರ್ಶಿ,
ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು
ದಾವಣಗೆರೆ ಜಿಲ್ಲಾ ಬ್ಯಾಂಕ್ ನೌಕರರ ಸಂಘ**



|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ : 21-01-1949 ನಿಧನ : 05-05-2021

ದಾವಣಗೆರೆ ಜಿಲ್ಲೆ, ತಾಲ್ಲೂಕು ಐಗೂರು ಗ್ರಾಮದ ವಾಸಿ,
**ಶ್ರೀಯುತ ಎಸ್.ಟಿ. ಮಲ್ಲೇಶಪ್ಪ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 05.05.2021 ನೇ ಬುಧವಾರ
ಸಂಜೆ 6.30ಕ್ಕೆ ನಮ್ಮ ಅಕ್ಕನವರಾದ

**ಶ್ರೀಮತಿ ಎಸ್.ಟಿ. ಮಹಾಂತಮ್ಮ**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
**ದಿನಾಂಕ 09.05.2021 ನೇ ಭಾನುವಾರ ಬೆಳಿಗ್ಗೆ
9.30 ಗಂಟೆಗೆ ಐಗೂರು ಗ್ರಾಮದ ಮೃತರ ಸ್ವಗೃಹದಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ
ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ
ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಮಗ ಶ್ರೀ ಬಿ.ಜಿ. ಸೋಮಶೇಖರಪ್ಪ ಮತ್ತು ಶ್ರೀಮತಿ ಸುಜಾತ
ಮತ್ತು ಮಕ್ಕಳು, ಐಗೂರು ಅಂಗಡಿ ವಂಶಸ್ಥರು, ಸೋಗಿ ವಂಶಸ್ಥರು ಹಾಗೂ ಬಂಧು-ಮಿತ್ರರು.
**ಮೊ. : 94488 73475, 63661 92426**

## ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ಆಶ್ರಯ



ಹರಪನಹಳ್ಳಿ, ಮೇ 8- ಕೋವಿಡ್‌ನಿಂದ ಪೋಷಕರನ್ನು ಕಳೆದು ಕೊಂಡು ಅನಾಥರಾದಂತಹ ಮಕ್ಕಳಿಗೆ ಆಶ್ರಯ ನೀಡಲು ಹರಪನಹಳ್ಳಿ ತಾಲ್ಲೂಕಿನ ನೀಲಗುಂದ ಗ್ರಾಮದ ಗುಡ್ಡದ ವಿರಕ್ತ ಮಠ ತೀರ್ಮಾನಿಸಿದೆ.

ಮಠದ ಪೀಠಾಧಿಪತಿ ಶ್ರೀ ಚೆನ್ನಬಸವ ಶಿವಯೋಗಿಗಳು ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡು ಅನಾಥರಾದ ಹಾಗೂ ಕೋವಿಡ್ ಚಿಕಿತ್ಸೆಗೆ ಹಣ, ಆಸ್ತಿ ಕಳೆದುಕೊಂಡು ಬೀದಿಗೆ ಬಂದ ಪೋಷಕರ ಮಕ್ಕಳು ಇದ್ದರೆ ನಮ್ಮ ಮಠ ಆಶ್ರಯ ನೀಡುತ್ತದೆ.

ಯಾರೇ ಇರಲಿ ಅಂತಹ ಮಕ್ಕಳಿಗೆ ಉಚಿತ ಊಟ, ವಸತಿ, ಶಿಕ್ಷಣ ನೀಡುವುದಾಗಿ ಅವರು ತಿಳಿಸಿದ್ದಾರೆ. ಸಂಪರ್ಕಿಸಿ : 7019511991.

## ಮತ್ತೊಂದು ಆಕ್ಸಿಜನ್ ಉತ್ಪಾದನಾ ಘಟಕ ಮಂಜೂರು

ದಾವಣಗೆರೆ, ಮೇ 8- ಇಲ್ಲಿನ ಜಿಲ್ಲಾಸ್ಪತ್ರೆ ಆವರಣದಲ್ಲಿ 82 ಲಕ್ಷ ರೂ. ವೆಚ್ಚದಲ್ಲಿ 1000 ಲೀಟರ್ ಪರ್ ಮಿನಿಟ್ ಸಾಮರ್ಥ್ಯದ ಘಟಕ ನಿರ್ಮಾಣವಾಗಲಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ. ಕೊರೊನಾ ಪೀಡಿತರಿಗೆ ಆಕ್ಸಿಜನ್ ಕೊರತೆ ನೀಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ 34 ಕೋಟಿ ರೂ. ವೆಚ್ಚದಲ್ಲಿ ರಾಜ್ಯದ 28 ಕಡೆಗಳಲ್ಲಿ ಆಕ್ಸಿಜನ್ ಉತ್ಪಾದನಾ ಘಟಕಗಳ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ಯಮಿಗಳಾದ ಒಎನ್‌ಜಿಸಿ ಹಾಗೂ ಎಂಆರ್‌ಪಿಎಲ್ ಕಂಪನಿಗಳಿಗೆ ಘಟಕ ಸ್ಥಾಪನೆ ಹೊಣೆ ನೀಡಲಾಗಿದೆ. ಜೂನ್ 30 ರೊಳಗೆ ಎಲ್ಲಾ ಘಟಕಗಳು ಪೂರ್ಣಗೊಂಡು ಕಾರ್ಯಾರಂಭ ಮಾಡಲಿವೆ ಎಂದು ತಿಳಿಸಿದ್ದಾರೆ.

# ಕೋವಿಡ್ ನಡುವೆಯೂ ರಾಜ್ಯದ ನಾಯಕತ್ವದ ಚಿಂತೆ

ಬೆಂಗಳೂರು, ಮೇ 8- ರಾಜ್ಯದಲ್ಲಿ ಕೋವಿಡ್-19 ಸೋಂಕು ಅಲೆ ತೀವ್ರಗತಿಯಲ್ಲಿ ಪ್ರಸರಣಗೊಳ್ಳುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಾಯಕತ್ವ ಬದಲಾವಣೆ ದೆಹಲಿ ವರಿಷ್ಠರ ಮಟ್ಟದಲ್ಲಿ ನಡೆದಿದೆ.

ನಾಯಕತ್ವ ಬದಲಾವಣೆ ವಿಷಯ ತಿಳಿದಿರುವ ಮುಖ್ಯಮಂತ್ರಿಯವರು ತಮ್ಮ ಅಧಿಕಾರ ಉಳಿಸಿಕೊಳ್ಳಲು ಇನ್ನಿಲ್ಲದ ಕಸರತ್ತು ನಡೆಸಿದ್ದಾರೆ.

ವರಿಷ್ಠರ ಮನವೊಲಿಸಲು ಗೃಹ ಸಚಿವ ಬಸವರಾಜ್ ಬೊಮ್ಮಾಯಿ, ಪುತ್ರ ವಿಜಯೇಂದ್ರ ಹಾಗೂ ಖ್ಯಾತ ವಕೀಲರ ತಂಡ ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ಬಿಡಾರ ಬಿಟ್ಟಿದೆ.

ರಾಜ್ಯದಲ್ಲಿ ಕೊರೊನಾ ನಿಯಂತ್ರಿಸಲು ಕರ್ಫ್ಯೂ ಹೇರಿದ್ದ ಮುಖ್ಯಮಂತ್ರಿಯವರು ನಾಯಕತ್ವ ಬದಲಾವಣೆ ಪ್ರಸ್ತಾಪ ಬರುತ್ತಿದ್ದಂತೆ, ತರಾತುರಿಯಲ್ಲಿ ಲಾಕ್‌ಡೌನ್ ಘೋಷಣೆ ಮಾಡಿ, ತಾವೂ ರಾಜಕೀಯ ಮಾಡಲು ಹೊರಟಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಈ ತಂಡ ಎರಡು ಭಾರಿ ಭೇಟಿ ಮಾಡಿ ಮಾತುಕತೆ ನಡೆಸಿದೆ.

ಕರ್ನಾಟಕದಲ್ಲಿ ಆಡಳಿತ ಕುಸಿತಗೊಂಡಿದೆ. ಭ್ರಷ್ಟಾಚಾರದ ಆರೋಪಗಳು ಕೇಳಿ ಬರುತ್ತಿವೆ. ಇದಕ್ಕೆ ನಮ್ಮಲ್ಲಿ ಪುರಾವೆಗಳು ಇವೆ. ಪಕ್ಷದ ಸಿದ್ಧಾಂತದ ಪ್ರಕಾರ ಯಡಿಯೂರಪ್ಪನವರು ವಯೋಮಿತಿ ಮೀರಿದ್ದಾರೆ. ಅವರು ಅಧಿಕಾರದಲ್ಲಿ ಮುಂದು ವರೆಯಲು ಆಗುವುದಿಲ್ಲ. ಅವರಿಗೆ ಆಗಿಂದಾಗ್ಗೆ ಆರೋಗ್ಯದ ಸಮಸ್ಯೆ ಕಾಡುತ್ತಿದೆ. ವಯೋಮಾನದ ಹಿನ್ನೆಲೆಯಲ್ಲಿ ಅವರು ಸಮರ್ಪಕ ಆಡಳಿತ ನಡೆಸಲು ಸಾಧ್ಯವಾಗುತ್ತಿಲ್ಲ.

ಸದ್ಯಕ್ಕೆ ಕೊರೊನಾ ನಿಯಂತ್ರಿಸಲು ನಿಮ್ಮಿಂದ ಆಗುತ್ತಿಲ್ಲ. ಈ ಹಿಂದೆಯೇ ಅವರಿಗೆ ಒಂದು ವರ್ಷ ಇಲ್ಲವೆ. ಎರಡು ವರ್ಷದ ಅವಧಿಯ ನಂತರ ಅಧಿಕಾರದಿಂದ ಕೆಳಗಿಳಿಯ ಬೇಕೆಂದು ತಿಳಿಸಿದ್ದೇವೆ. ಅದಕ್ಕೆ ಅವರು ಸಮ್ಮತಿ ಕೂಡಾ ನೀಡಿದ್ದರು. ಆದರೆ, ಇದೀಗ ತಮ್ಮ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ ಎಂದು ಅಮಿತ್ ಷಾ, ಬೊಮ್ಮಾಯಿ ಹಾಗೂ ಅವರ ಪುತ್ರ ವಿಜಯೇಂದ್ರ ಅವರಿಗೆ ತಿಳಿಸಿದ್ದಾರೆ.

ರಾಜ್ಯದಲ್ಲಿ ನಡೆದ ಉಪಚುನಾವಣೆಯ ನಂತರ ಅಧಿಕಾರದಿಂದ ಕೆಳಗಿಳಿಯಬೇಕಿತ್ತು. ವರಿಷ್ಠರು ಸೂಚನೆ ಕೊಟ್ಟಿದ್ದರು. ಆದರೆ, ಇದುವರೆಗೂ ಆ ಕಾರ್ಯವಾಗಿಲ್ಲ. ಪಕ್ಷದ ರಾಜ್ಯ ಘಟಕದಲ್ಲೇ ಅವರ ವಿರುದ್ಧ ಭಿನ್ನಾಭಿಪ್ರಾಯಗಳು ಸ್ಫೋಟಗೊಳ್ಳುತ್ತಿವೆ. ಇತ್ತೀಚಿನ ಚುನಾವಣಾ ಫಲಿತಾಂಶದಲ್ಲೂ ನಾವು ಹಿನ್ನಡೆ ಸಾಧಿಸಿದ್ದೇವೆ.

ಆಡಳಿತದಲ್ಲಿರುವ ಲೋಪದೋಷಗಳೇ ಇದಕ್ಕೆಲ್ಲ ಕಾರಣ ಎಂದು ಅಮಿತ್ ಷಾ ಹೇಳಿದ್ದಾರೆ. ಆದರೆ ಇದನ್ನು ಒಪ್ಪದ ಪುತ್ರ ವಿಜಯೇಂದ್ರ ತಮ್ಮ ತಂದೆಯವರು ಉತ್ತಮ ಆಡಳಿತ ನೀಡುತ್ತಿದ್ದಾರೆ. ಅವರ ಆಡಳಿತದಲ್ಲಿ ಯಾವುದೇ ಭ್ರಷ್ಟಾಚಾರಗಳು ನಡೆದಿಲ್ಲ ಎಂದಿದ್ದಾರೆ.

ಅವರಿಗೆ ಆಗದವರು ಆರೋಪಗಳನ್ನು ಮಾಡುತ್ತಾರೆ, ನಿಮಗೂ ವರದಿ ನೀಡುತ್ತಿದ್ದಾರೆ ಎಂದು ಹೇಳಿ ಸರ್ಕಾರ ಕೈಗೊಂಡ ಕೆಲವು ದಾಖಲೆಗಳನ್ನು ನೀಡಲು ಬಯಸಿದ್ದಾರೆ.

ಇದಕ್ಕೆ ಅಮಿತ್ ಷಾ ಯಾವುದೇ ಸೊಪ್ಪು ಹಾಕಿಲ್ಲ. ಕರ್ನಾಟಕ ಸರ್ಕಾರ ಕೈಗೊಂಡಿರುವ ಕೆಲವು ನಿರ್ಧಾರಗಳು ಕಾನೂನಾತ್ಮಕವಾಗಿವೆ ಎಂದು ಕಾನೂನು ತಜ್ಞರಿಂದಲೇ ಅಮಿತ್ ಷಾ ಅವರಿಗೆ ಮನವರಿಕೆ ಮಾಡಲು, ನಗರದಿಂದಲೇ ಕಾನೂನು ತಜ್ಞರನ್ನು ಕರೆದುಕೊಂಡು ಹೋಗಿದ್ದರು. ಆದರೆ, ಅಮಿತ್ ಷಾ ಅವರನ್ನು ಭೇಟಿ ಮಾಡಲು ನಿರಾಕರಿಸಿದರು. ನಾಯಕತ್ವ ಬದಲಾವಣೆಯಾಗಬೇಕಿದೆ. ತಿಂಗಳ ಅಂತ್ಯದವರೆಗೂ ಗಡುವು ನೀಡುತ್ತೇವೆ.

ಅಷ್ಟರಲ್ಲಿ ತೀರ್ಮಾನ ಕೈಗೊಳ್ಳಿ ಎಂದಿರುವ ಅಮಿತ್ ಷಾ, ವಿಜಯೇಂದ್ರ ಅವರನ್ನು ಉದ್ದೇಶಿಸಿ ನಿಮಗೆ ಪಕ್ಷದಲ್ಲಿ ಒಳ್ಳೆಯ ಭವಿಷ್ಯವಿದೆ. ದುಡುಕಬೇಡಿ, ನಿಮ್ಮ ತಂದೆಯವರನ್ನು ಮನವೊಲಿಸಿ ಅಧಿಕಾರದಿಂದ ಕೆಳಗಿಳಿಸಿ. ನೀವು ಮುಂದಿನ ಸರ್ಕಾರದಲ್ಲಿ ಭಾಗಿಯಾಗಿ. ಪಕ್ಷ ನಿಮ್ಮ ಬೆನ್ನು ಹಿಂದೆ ಇರುತ್ತದೆ ಎಂದೆಲ್ಲಾ ತಿಳಿಸಿದ್ದಾರೆ.

ವಿಶೇಷ ವಿಮಾನದಲ್ಲಿ ನಿನ್ನೆ ದೆಹಲಿಗೆ ತೆರಳಿದ್ದ ಬೊಮ್ಮಾಯಿ ತಂಡ ಅಮಿತ್ ಷಾ ಅವರನ್ನಷ್ಟೇ ಅಲ್ಲದೆ, ಪಕ್ಷದ ಇತರೆ ಮುಖಂಡರನ್ನು ಭೇಟಿ ಮಾಡಿದ್ದಾರೆ.

ಇಷ್ಟರ ನಡುವೆ ಯಡಿಯೂರಪ್ಪ ಅವರ ಸ್ಥಾನಕ್ಕೆ ಯಾರನ್ನು ತರಬೇಕು ಎಂಬುದರ ಬಗ್ಗೆಯು ಪಕ್ಷದ ವರಿಷ್ಠರಲ್ಲಿ ಚರ್ಚೆ ನಡೆದಿದೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ರಾಜ್ಯದ ಉಪಮುಖ್ಯಮಂತ್ರಿ ಡಾ. ಅಶ್ವತ್ಥ್‌ನಾರಾಯಣ್, ಯಡಿಯೂರಪ್ಪ ಸಮುದಾಯದವರಿಗೆ ಅವಕಾಶ ನೀಡಬೇಕೆಂದಾದರೆ, ಬಸವರಾಜ್ ಬೊಮ್ಮಾಯಿ, ಸಚಿವ ವಿ. ಸೋಮಣ್ಣ ಅವರ ಹೆಸರುಗಳು ಮುಂಚೂಣಿಯಲ್ಲಿವೆ.

ನಾಯಕತ್ವ ಬದಲಾವಣೆ ವರಿಷ್ಠರಲ್ಲಿ ಚರ್ಚೆಯಾಗುತ್ತಿದ್ದಂತೆ, ಕಳೆದ ಒಂದು ವಾರದಿಂದ ಸರ್ಕಾರದ ಆಡಳಿತವನ್ನು ಟೀಕಿಸಲು ಆರಂಭಿಸಿದ್ದಾರೆ.

ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಒಂದೇ ದಿನ 24 ಮಂದಿ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರವೇ ಹೊಣೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿಟಿ ರವಿ ಟೀಕಿಸಿದ್ದರು.

ಅಷ್ಟೇ ಅಲ್ಲದೆ, ಸಚಿವ ಸುಧಾಕರ್ ರಾಜೀನಾಮೆಗೂ ಆಗ್ರಹಿಸಿದ್ದರು. ಇದಾದ ನಂತರ ಬಿಜೆಪಿ ಸಂಸದ ತೇಜಸ್ವಿ ಸೂರ್ಯ, ಮತ್ತೆ ಕೆಲ ಬಿಜೆಪಿ ಶಾಸಕರು ಹಾಸಿಗೆ ಹಗರಣವನ್ನು ಬಯಲಿಗೆ ಎಳೆದಿದ್ದರು.

ಇದಾದ ನಂತರ ಜಿಂದಾಲ್‌ಗೆ ದೊಡ್ಡ ಪ್ರಮಾಣದಲ್ಲಿ ಸರ್ಕಾರಿ ಭೂಮಿಯನ್ನು ಪರಭಾರೆ ಮಾಡಿದ್ದಕ್ಕೂ ಪಕ್ಷದ ಶಾಸಕರು ಅಪಸ್ವರ ಎತ್ತಿದ್ದಾರೆ.

# ಅನಗತ್ಯ ಸಂಚಾರ ತಡೆಗೆ ಕಟ್ಟುನಿಟ್ಟಿನ ಕ್ರಮ

ದಾವಣಗೆರೆ, ಮೇ 8 - ಅಗತ್ಯವಿರುವ ವಸ್ತುಗಳನ್ನು ತೆಗೆದುಕೊಳ್ಳಲು ನಿಗದಿ ಪಡಿಸಿರುವ ಸಮಯ ಮೀರಿ ಅನಗತ್ಯವಾಗಿ ಸಂಚರಿಸುವವವರ ವಿರುದ್ಧ ಯಾವುದೇ ಮುಲಾಜಿಲ್ಲದೇ, ರಿಯಾಯಿತಿ ಕೊಡದೇ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ್ ಸೂಚನೆ ನೀಡಿದ್ದಾರೆ.

**ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ಜಿಲ್ಲೆಯಲ್ಲಿ ಕೊರೊನಾಗೆ ಚಿಕಿತ್ಸೆ ನೀಡುತ್ತಿರುವ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಸೌಲಭ್ಯಗಳ ಪರಿಶೀಲನೆ ನಡೆಸಿದರು.**



ಜಿಲ್ಲಾ ಉಸ್ತುವಾರಿ ಸಚಿವರಾದ ಭೈರತಿ ಬಸವರಾಜ ಇವರು ದಾವಣಗೆರೆ, ಹೊನ್ನಾಳಿ, ನ್ಯಾಮತಿ, ಚನ್ನಗಿರಿ ತಾಲ್ಲೂಕುಗಳ ಆಸ್ಪತ್ರೆಗಳಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಕೊರೊನಾ ಪರಿಸ್ಥಿತಿ ಕುರಿತು ಶನಿವಾರ ಅಲ್ಲಿಯ ಅಧಿಕಾರಿಗಳೊಂದಿಗೆ ಚರ್ಚಿಸಿದ ಸಂದರ್ಭದಲ್ಲಿ ಅವರು ಈ ಸೂಚನೆ ನೀಡಿದ್ದಾರೆ.

ಚನ್ನಗಿರಿ ತಾಲ್ಲೂಕು ಆಸ್ಪತ್ರೆಗೆ ಭೇಟಿ ನೀಡಿ ನಂತರ ಇಲ್ಲಿಯ ಆಡಳಿತ ಭವನದ ರಾಜೀವ್‌ಗಾಂಧಿ ಸಭಾಂಗಣದಲ್ಲಿ ಕೊರೊನಾ ನಿಯಂತ್ರಣ ಕುರಿತು ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದ ಸಚಿವರು, ಸಮಯ ಮೀರಿ ಅನಗತ್ಯವಾಗಿ ಸಂಚರಿಸುವ ವಾಹನಗಳನ್ನು ಯಾವುದೇ ಮುಲಾಜಿಲ್ಲದೇ, ರಿಯಾಯಿತಿ ಕೊಡದೇ ಅಂತಹವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಸೋಂಕು ಹರಡದಂತೆ ಎಲ್ಲಾ ಅಧಿಕಾರಿಗಳು ಶ್ರಮವಹಿಸಿ ಕಾರ್ಯನಿರ್ವಹಿಸಬೇಕು ಎಂದರು.

ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಮಾತನಾಡಿ, ಲಸಿಕೆ ಕುರಿತು ಈಗಾಗಲೇ ಜನರಲ್ಲಿ ಒಳ್ಳೆಯ ಅಭಿಪ್ರಾಯ ಬಂದಿದೆ. ಚನ್ನಗಿರಿಯಲ್ಲಿ ಮೊದಲ ಹಂತದಲ್ಲಿ 38 ಸಾವಿರ ಲಸಿಕೆ ನೀಡಲಾಗಿದ್ದು, 2ನೇ ಹಂತದ ಡೋಸ್‌ಗಾಗಿ ಸಾಕಷ್ಟು ಜನರು ಮನವಿ ಮಾಡುತ್ತಿದ್ದಾರೆ. ಹಾಗಾಗಿ ತಾಲ್ಲೂಕಿಗೆ ಲಸಿಕೆ ಬಿಡುಗಡೆ ಮಾಡಬೇಕು ಎಂದು ಸಚಿವರಲ್ಲಿ ಮನವಿ ಮಾಡಿದರು.

ತಹಶೀಲ್ದಾರ್ ಪುಟ್ಟರಾಜ್, ಪೊಲೀಸ್ ಇಲಾಖೆಯ ಮಧು ಮಾತನಾಡಿ, ತಾಲ್ಲೂಕಿನ ಕೊರೊನಾ ಪರಿಸ್ಥಿತಿ ಕುರಿತು ವಿವರ ನೀಡಿದರು.

ಡಿಹೆಚ್‌ಒ ಡಾ.ನಾಗರಾಜ್ ಮಾತನಾಡಿ, ಜಿಲ್ಲೆಯಲ್ಲಿ 4 ಸಮುದಾಯ ಆರೋಗ್ಯ ಕೇಂದ್ರಗಳಿದ್ದು ಅಲ್ಲಿ 30-30 ಆಕ್ಸಿಜನ್ ಬೆಡ್‌ಗಳ ವ್ಯವಸ್ಥೆ ಮಾಡಲಾಗಿದೆ. ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಮತ್ತು ಸಂತೆಬೆನ್ನೂರಿನಲ್ಲಿ 30 ಆಕ್ಸಿಜನ್ ಬೆಡ್‌ಗಳಿದ್ದು ವೈದ್ಯರ ಕೊರತೆಯಿದೆ. ಕೇವಲ ಇಬ್ಬರು ವೈದ್ಯರಿದ್ದಾರೆ. ಸದ್ಯದಲ್ಲೇ ವೈದ್ಯರ ನೇಮಕಾತಿ ಮಾಡಿಕೊಳ್ಳುತ್ತೇವೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಬಸವರಾಜ, ಲಸಿಕೆ ಕುರಿತು ಯಾರು ಆತಂಕ ಪಡಬೇಡಿ. ಈ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದು ಆದಷ್ಟು ಬೇಗ ಪ್ರತಿ ನಾಗರಿಕರಿಗೆ ವ್ಯಾಕ್ಸಿನೇಷನ್ ದೊರಕಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಬಸವಾಪಟ್ಟಣ, ಕೆರೆಬಿಳಚಿ, ಸಂತೆಬೆನ್ನೂರಿಗೆ ಆಕ್ಸಿಜನ್ ಬೆಡ್ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು ಎಂದು ಸೂಚಿಸಿದರು.

**82 ಕೋಟಿ ವೆಚ್ಚದಲ್ಲಿ ಒಳಚರಂಡಿ ವ್ಯವಸ್ಥೆ:** ಚನ್ನಗಿರಿ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಗಾಗಿ ರೂ.82 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ. ಆದಷ್ಟು ಬೇಗ ಗುದ್ದಲಿ ಪೂಜೆ ನೆರವೇರಿಸಲಿದ್ದೇವೆ. ಕೋವಿಡ್ ಅಂತಹ ಕ್ಲಿಷ್ಟಕರ ಸನ್ನಿವೇಶದಲ್ಲೂ ಅಭಿವೃದ್ಧಿ ಕೆಲಸಗಳು ಎಲ್ಲಿಯೂ ನಿಂತಿಲ್ಲ. ಅಭಿವೃದ್ಧಿಯೊಂದಿಗೆ ಕೋವಿಡ್ ನಿಯಂತ್ರಣವನ್ನು ಸಮರ್ಪಕವಾಗಿ ನಿಭಾಯಿಸುತ್ತಿದ್ದೇವೆ ಎಂದು ಸಚಿವರು ತಿಳಿಸಿದರು.

ಹೊನ್ನಾಳಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಶಾಸಕ ಎಂ.ಪಿ. ರೇಣುಕಾಚಾರ್ಯ, ನ್ಯಾಮತಿ ತಾಲ್ಲೂಕಿನ ರಾಮೇಶ್ವರದಲ್ಲಿ ಮೇ 7 ರಂದು ರ್‍ಯಾಪಿಡ್ ಪರೀಕ್ಷೆ ಮಾಡಲಾಗಿದ್ದು 21 ಜನರಿಗೆ ಪಾಸಿಟಿವ್ ಬಂದಿದೆ. ಇಂದು 6 ಜನರಿಗೆ ಪಾಸಿಟಿವ್ ಬಂದಿದ್ದು, ಇಬ್ಬರು ಗಂಡ-ಹೆಂಡತಿ ಮೃತರಾಗಿದ್ದಾರೆ. ಕೊರೊನಾ ಸೋಂಕಿನ ಲಕ್ಷಣ ಕಂಡು ಬಂದಾಕ್ಷಣ ಆಸ್ಪತ್ರೆಗಳಿಗೆ ಬಂದರೆ ಜೀವ ಉಳಿಸಬಹುದು ಎಂದರು.

ಸಭೆಯಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ ಸಲಹೆ ನೀಡಿದರು. ಹಾಗೂ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಕೊರೊನಾದಿಂದ ಪಾರಾಗಲು ಹಬೆ ರಕ್ಷಣೆ ಪಡೆಯುವ ಪೊಲೀಸರು



ದಾವಣಗೆರೆ, ಮೇ 8- ಕೊರೊನಾ ಸೋಂಕಿನಿಂದ ಜನರನ್ನು ರಕ್ಷಿಸುವ ಜೊತೆಗೆ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಜಿಲ್ಲಾ ಪೊಲೀಸರು ಹೊಸ ಪ್ರಯತ್ನಕ್ಕೆ ಮುಂದಾಗಿದ್ದಾರೆ.

ಉಸಿರಾಟದ ಸಮಸ್ಯೆಯನ್ನು ನೀಗಿಸುವ ಸಾಧನವಾಗಿ ಹಬೆಯನ್ನು ತೆಗೆದುಕೊಳ್ಳಲು ಪೊಲೀಸರು ಮುಂದಾಗಿದ್ದಾರೆ.

ನಗರದ ಎಲ್ಲಾ ಪೊಲೀಸರಿಗಾಗಿ ಡಿಎಆರ್ ಗ್ರೌಂಡ್‌ನಲ್ಲಿ ಒಮ್ಮೆಗೆ 5 ಜನ ಕೂತುಕೊಂಡು ಹಬೆಯನ್ನು ತೆಗೆದುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ಪ್ರೆಶರ್ ಕುಕ್ಕರ್‌ನಿಂದ ಪೈಪ್ ಕನೆಕ್ಷನ್ ಕೊಟ್ಟು 5 ಕಡೆ ಪ್ರತ್ಯೇಕವಾಗಿ ಪೈಪ್‌ಗಳನ್ನು ಅಳವಡಿಸಿಕೊಂಡಿದ್ದಾರೆ. ಪ್ರೆಶರ್ ಕುಕ್ಕರ್‌ನಿಂದ ಬರುವ ಬಿಸಿ ಬಿಸಿ ಹಬೆ ಸೀದಾ ಐದು ಜನರಿಗೆ ತಲುಪುತ್ತದೆ. ಇದರ ಹೊರತಾಗಿ ಕೋವಿಡ್ ತಡೆಗಟ್ಟಲು ಪ್ರಾಣಾಯಾಮ, ಕಷಾಯ, ಜಿಂಕ್ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಹೊಸದಾಗಿ ಎರಡು ಕುಕ್ಕರ್ ಹಾಗೂ ಸ್ಟವ್ ತರಲಾಗಿದೆ. ಪ್ರೆಶರ್ ಕುಕ್ಕರ್‌ನಲ್ಲಿ ಮೊದಲು ನೀರನ್ನು ತುಂಬಿಸಿ ಬಿಸಿ ಮಾಡಲಾಗುತ್ತೆ. ನಂತರ ಆ ಬಿಸಿ ನೀರಿಗೆ ಆಯುಷ್ ಇಲಾಖೆ ಕೊಟ್ಟಿರುವ ಆರಖ್ ಅಜೀಬ್ ಆಯುರ್ವೇದದ ಲಿಕ್ವಿಡ್ ಅನ್ನು ಕುಕ್ಕರ್‌ನಲ್ಲಿ ಹಾಕಲಾಗುತ್ತೆ. ಇದರ ಜೊತೆಗೆ ಕೆಲ ಗಿಡಮೂಲಿಕೆಗಳು, ಬೇವಿನ ಎಲೆಗಳು, ತುಳಸಿ, ನೀಲಗಿರಿ ಎಲೆಗಳನ್ನು ಸೇರಿಸಲಾಗುತ್ತೆ. ನಂತರ ಅವೆಲ್ಲವವೂ ನೀರಿನಲ್ಲಿ ಕುದಿಸಿದಾಗ ಕುಕ್ಕರ್‌ನಿಂದ ಹೊರ ಬರುವ ಹಬೆಯನ್ನು ಪೊಲೀಸರು ಟ್ಯೂಬ್ ಮೂಲಕ ತೆಗೆದುಕೊಳ್ಳುತ್ತಿದ್ದಾರೆ.

ಕುಕ್ಕರ್‌ಗೆ ಪೈಪ್ ಅನ್ನ ಅಳವಡಿಸಿಕೊಂಡು ಒಮ್ಮೆಗೆ 5 ಜನರು ಹಬೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಮುಂಜಾನೆ ಕರ್ತವ್ಯಕ್ಕೆ ಹೋಗುವ ಮುನ್ನ 5 ನಿಮಿಷ ನಂತರ ಸಂಜೆಯ ವೇಳೆ ಕರ್ತವ್ಯ ಮುಗಿಸಿಕೊಂಡು ಬಂದಾಗ 5 ನಿಮಿಷ ಹಬೆ ತೆಗೆದುಕೊಳ್ಳುತ್ತಾರೆ. ಸ್ಟೀಲ್ ಪ್ರೆಶರ್ ಕುಕ್ಕರ್‌ನಿಂದ ಇನ್‌ಹೇಲಿಂಗ್‌ಗಾಗಿ ಒಟ್ಟು 50 ಮೀಟರ್ ಪೈಪ್ ಮತ್ತು ಎರಡು ಜೋಡಿ ಅಲ್ಯೂಮಿನಿಯಂ ಪೈಪ್‌ಗಳನ್ನು ಅಳವಡಿಸಿಕೊಳ್ಳಲಾಗಿದೆ. ಒಂದು ಸಮಯದಲ್ಲಿ ಐವರು ಪೊಲೀಸ್ ಅಧಿಕಾರಿಗಳಿಗೆ ಉಸಿರಾಡಲು ಸಹಾಯ ಮಾಡುತ್ತದೆ ಎಂಬ ಮಾಹಿತಿಯನ್ನು ಪೊಲೀಸ್ ಅಧಿಕಾರಿಗಳು ನೀಡಿದ್ದಾರೆ.

## ಆಸ್ಪತ್ರೆಗೆ ಪಾಸಿಟಿವ್ ಕಡ್ಡಾಯವಲ್ಲ

**(1ನೇ ಪುಟದಿಂದ)** ಎಂದು ತಿಳಿಸಿದೆ.

ಪ್ರಾಮಾಣಿಕವಾಗಿ, ಪರಿಣಾಮಕಾರಿಯಾಗಿ ಹಾಗೂ ಸಂಪೂರ್ಣವಾಗಿ ಕೊರೊನಾ ರೋಗಿಗೆ ಚಿಕಿತ್ಸೆ ಒದಗಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಕೇಂದ್ರ ಸರ್ಕಾರ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶದಡಿ ಬರುವ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು ಕೊರೊನಾ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದರೆ, ಟೆಸ್ಟ್‌ನಲ್ಲಿ ಪಾಸಿಟಿವ್ ಕಡ್ಡಾಯ ಎಂದು ಹೇಳುವಂತಿಲ್ಲ ಎಂದು ತಿಳಿಸಲಾಗಿದೆ. ಕೊರೊನಾ ಸೋಂಕಿನ ಶಂಕಿತ ಪ್ರಕರಣಗಳನ್ನು ಆಸ್ಪತ್ರೆಗಳ ಕೊರೊನಾ ಶಂಕಿತರ ವಾರ್ಡ್ ಇಲ್ಲವೇ ಕೊರೊನಾ ಆರೋಗ್ಯ ಕೇಂದ್ರಕ್ಕೆ ಪ್ರಕರಣವನ್ನು ಆಧರಿಸಿ ದಾಖಲಿಸಿಕೊಳ್ಳಬೇಕಿದೆ ಎಂದು ಹೇಳಲಾಗಿದೆ. ಅಗತ್ಯಕ್ಕೆ ಅನುಗುಣವಾಗಿ ಆಸ್ಪತ್ರೆಗಳು ದಾಖಲಾತಿ ಕಲ್ಪಿಸಬೇಕು. ಅಗತ್ಯವಿಲ್ಲದಿದ್ದರೂ ಆಸ್ಪತ್ರೆಗೆ ದಾಖಲಿಸಿಕೊಳ್ಳಬಾರದು. ಆಸ್ಪತ್ರೆಯಿಂದ ಬಿಡುಗಡೆ ಮಾಡಲು ಇರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ತಿಳಿಸಲಾಗಿದೆ.

## ಜಿಲ್ಲೆಯಲ್ಲಿ 372 ಸೋಂಕಿತರು ಗುಣಮುಖ

ದಾವಣಗೆರೆ, ಮೇ 8 - ಜಿಲ್ಲೆಯಲ್ಲಿ ಶನಿವಾರ 323 ಕೊರೊನಾ ಸೋಂಕಿತರು ಪತ್ತೆಯಾಗಿದ್ದಾರೆ. ಇದೇ ದಿನ 372 ಸೋಂಕಿತರು ಗುಣಮುಖರಾಗಿದ್ದಾರೆ. ದಾವಣಗೆರೆ ತಾಲ್ಲೂಕಿನ ನಲ್ಕುಂದದ 70 ವರ್ಷದ ಪುರುಷರೊಬ್ಬರು ಕೊರೊನಾದಿಂದ ಸಾವನ್ನಪ್ಪಿದ್ದಾರೆ. ದಾವಣಗೆರೆ ತಾಲ್ಲೂಕಿನಲ್ಲಿ 168, ಹರಿಹರದಲ್ಲಿ 41, ಜಗಳೂರಿನಲ್ಲಿ 23, ಚನ್ನಗಿರಿಯಲ್ಲಿ 33, ಹೊನ್ನಾಳಿ ಯಲ್ಲಿ 39 ಹಾಗೂ ಹೊರ ಜಿಲ್ಲೆಗಳ 19 ಸೋಂಕಿತರು ಪತ್ತೆಯಾಗಿದ್ದಾರೆ.

## ಎರಡನೇ ಡೋಸ್ ಲಸಿಕೆಗೆ ಆದ್ಯತೆ

ಬೆಂಗಳೂರು, ಮೇ 8- ರಾಜ್ಯದಲ್ಲಿ ಲಭ್ಯವಿರುವ ಕೋವಿಶೀಲ್ಡ್ ಲಸಿಕೆಯಲ್ಲಿ ಶೇ.70 ರಷ್ಟನ್ನು 2ನೇ ಡೋಸ್ ಬಾಕಿಯಿರುವ 45 ವರ್ಷ ಮೇಲ್ಪಟ್ಟವರಿಗೆ ಆದ್ಯತೆ ಮೇರೆಗೆ ನೀಡಲಾಗುವುದು ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದ್ದಾರೆ. ಉಳಿದ 30 ಲಸಿಕೆಯನ್ನು 45 ವರ್ಷ ಮೇಲ್ಪಟ್ಟವರಿಗೆ 1ನೇ ಡೋಸ್ ನೀಡಲು ಬಳಸಲಾಗುವುದು. ಕೋವ್ಯಾಕ್ಸಿನ್ ಲಸಿಕೆಯನ್ನು 2ನೇ ಡೋಸ್ ಬಾಕಿ ಇರುವ 45 ವರ್ಷ ಮೇಲ್ಪಟ್ಟವರಿಗೆ ಮಾತ್ರ ನೀಡಲಾಗುವುದು ಎಂದಿದ್ದಾರೆ.

# ಅಬ್ಬರಿಸಿದರೂ ಸಿಗದ ಲಸಿಕೆ

**(1ನೇ ಪುಟದಿಂದ)** ಹಾಕಿಸಿಕೊಳ್ಳಬೇಕು.

ಪ್ರಸ್ತುತ ರಾಜ್ಯದಲ್ಲಿ ಹಿರಿಯರು ಮತ್ತು ಆರೋಗ್ಯ ಸಮಸ್ಯೆ ಹೊಂದಿದವರು ಮೊದಲ ಡೋಸ್ ಪಡೆದು ಆರು ವಾರ ಕಳೆದಿದ್ದು, ಎರಡನೇ ಡೋಸ್ ಶೀಘ್ರ ನೀಡಬೇಕಿದೆ. ಅಲ್ಲದೆ, 45-59 ವರ್ಷದವರು ಮೊದಲ ಡೋಸ್ ಲಸಿಕೆ ಪಡೆದು ಐದು ವಾರ ಪೂರ್ಣಗೊಂಡಿದೆ.

ಇವರಿಗೆ ಮುಂದಿನ ವಾರಾಂತ್ಯದಲ್ಲಿ ಎರಡನೇ ಡೋಸ್ ಲಸಿಕೆ ಹಾಕಬೇಕಿದೆ. ಆದರೆ, ಕೇಂದ್ರ ಸರ್ಕಾರದಿಂದ ಅಗತ್ಯ ಪ್ರಮಾಣದಲ್ಲಿ ಲಸಿಕೆ ಸಿಗದ ಕಾರಣ ಎರಡನೇ ಡೋಸ್‌ಗೂ ದಾಸ್ತಾನು ಕೊರತೆ ಎದುರಾಗಿದೆ. ಪ್ರಸ್ತುತ 5.75 ಲಕ್ಷ ಕೋವಿಶೀಲ್ಡ್ ಲಸಿಕೆ ಇದೆ.

ಕೋವ್ಯಾಕ್ಸಿನ್ ಕೇವಲ 30 ಸಾವಿರ ಡೋಸ್ ಮಾತ್ರ ಇದೆ. ಆರಂಭದಲ್ಲಿ ಲಸಿಕೆ ಹಾಕಿಸಿಕೊಳ್ಳಲು ಆಸಕ್ತಿ ತೋರದ ಜನ ಈಗ ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರುತ್ತಿದ್ದಾರೆ ಎಂದು ಲಸಿಕಾ ಕೇಂದ್ರದ ಸಿಬ್ಬಂದಿ ಹೇಳುತ್ತಾರೆ.

**15 ಲಕ್ಷ ಡೋಸ್ ಲಸಿಕೆ ಬರುವ ನಿರೀಕ್ಷೆ :** ಕೊರೊನಾ ಲಸಿಕೆ ಅಭಾವದಿಂದ 18 ರಿಂದ 44 ವರ್ಷದವರಿಗೆ ಲಸಿಕೆ ನೀಡುವ ಕೆಲಸ ಮಂದಗತಿಯಲ್ಲಿ ಸಾಗುತ್ತಿದೆ.

ಮೇ 2ನೇ ವಾರದಲ್ಲಿ 15 ಲಕ್ಷ ಡೋಸ್ ಲಸಿಕೆ ಬರುವ ನಿರೀಕ್ಷೆಯಿದೆ ಎಂದು ಹೇಳಲಾಗುತ್ತಿದೆ. 18 ರಿಂದ 44 ವರ್ಷ ವಯಸ್ಸಿನವರಿಗೆ ರಾಜ್ಯ ಸರ್ಕಾರ ಲಸಿಕೆ ಖರೀದಿಸಿ ಉಚಿತವಾಗಿ ನೀಡಲು ನಿರ್ಧರಿಸಿ, ಈ ಅಭಿಯಾನಕ್ಕೆ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಮೇ 1ರಂದು ಚಾಲನೆ ನೀಡಿದ್ದರು.

ಆದರೆ, ಸಾಕಷ್ಟು ಪ್ರಮಾಣದಲ್ಲಿ ಲಸಿಕೆ ಪೂರೈಕೆಗೂ ಮೊದಲೇ ಅವರು ತರಾತುರಿಯಲ್ಲಿ ಚಾಲನೆ ನೀಡಿರುವುದು ಸಮಸ್ಯೆಗೆ ಕಾರಣ ಎಂಬ ಮಾತುಗಳು ಕೇಳಿ ಬರುತ್ತಿವೆ. 18 ವರ್ಷ ದಾಟಿದವರಿಗೆ ಲಸಿಕೆ ನೀಡುವ ಉದ್ದೇಶದಿಂದ 2 ಕೋಟಿ ಡೋಸ್ ಕೋವಿಶೀಲ್ಡ್ ಖರೀದಿಗೆ ವಾರದ ಹಿಂದೆಯೇ ಉತ್ಪಾದಕ ಕಂಪನಿಗೆ ಸರ್ಕಾರ ಹಣ ಪಾವತಿಸಿದೆ.

ಆದರೆ, ಇದುವರೆಗೆ ಕೇವಲ 3 ಲಕ್ಷ ಮಾತ್ರ ಸರಬರಾಜು ಆಗಿದೆ. ಹೀಗಾಗಿ, ಬೆಂಗಳೂರಿನಲ್ಲಿ ಮಾತ್ರ 18 ರಿಂದ 44 ವರ್ಷದ 5,136 ಜನರಿಗೆ ಲಸಿಕೆ ಹಾಕಲಾಗಿದೆ. ಸದ್ಯ ದಾಸ್ತಾನು ಲಭ್ಯವಿರುವ ಕಡೆಗಳಲ್ಲಿ ಹೊಸಬರಿಗೆ ಅಥವಾ ಮೊದಲ ಡೋಸ್ ಪಡೆಯುವವರಿಗಿಂತಲೂ ಎರಡನೇ ಡೋಸ್ ಪಡೆಯುವವರಿಗೆ ಆದ್ಯತೆ ನೀಡಲು ಸೂಚಿಸಲಾಗಿದೆ.

ಸಾರ್ವಜನಿಕರು ಕೂಡ ಎರಡನೇ ಡೋಸ್ ಪಡೆಯುವವರಿಗೆ ಅವಕಾಶ ಮಾಡಿಕೊಡಬೇಕು ಎಂದು ಆರೋಗ್ಯ ಇಲಾಖೆ ಲಸಿಕೆ ವಿಭಾಗದ ಅಧಿಕಾರಿಗಳು ಮನವಿ ಮಾಡಿದ್ದಾರೆ

ತಿಂಗಳಲ್ಲಿ 40 ಲಕ್ಷ ಮಂದಿಗೆ ಎರಡನೇ ಡೋಸ್ ಲಸಿಕೆ ಬೇಕಿದೆ. ಮಾರ್ಚ್ ಮತ್ತು ಏಪ್ರಿಲ್ 15ರವರೆಗೆ ಪಡೆದವರು ಈ ತಿಂಗಳಲ್ಲಿ ಎರಡನೇ ಡೋಸ್ ಲಸಿಕೆ ಪಡೆಯಬೇಕಿದೆ.

## ಕೊವ್ಯಾಕ್ಸಿನ್‌ಗಾಗಿ ಲಸಿಕೆ ಕೇಂದ್ರದಲ್ಲಿ ಜನಜಂಗುಳಿ



ಸಿ.ಜಿ. ಆಸ್ಪತ್ರೆ ಲಸಿಕಾ ಕೇಂದ್ರದಲ್ಲಿ ಕೋವ್ಯಾಕ್ಸಿನ್ ಲಸಿಕೆ ಕೇಳುತ್ತಿರುವ ನಾಗರಿಕರು.

**(1ನೇ ಪುಟದಿಂದ)** ಇನ್ನು ಕೆಲವರು ಆನ್‌ಲೈನ್‌ನಲ್ಲಿ ನೋಂದಾಯಿಸುವ ಪ್ರಕ್ರಿಯೆ ಸಮರ್ಪಕವಾಗಿಲ್ಲ ಎಂದು ಆಕ್ಷೇಪಿಸುತ್ತಿದ್ದರು. ಇನ್ನು ಕೆಲವರು ನಮ್ಮ ಮೊದಲ ಲಸಿಕೆಯ ಅವಧಿ ಮೀರಿ ಹೋಗಿದೆ ಎಂದು ಪೇಚಾಡುತ್ತಿದ್ದರು.

ಈ ಬಗ್ಗೆ ಹೇಳಿಕೆ ನೀಡಿರುವ ಲಸಿಕಾ ಕೇಂದ್ರದ ವೈದ್ಯ ಡಾ. ಸಿದ್ದರಾಮೇಶ್ವರ, ಶನಿವಾರ 150 ಡೋಸ್ ಲಸಿಕೆಯನ್ನು ಕೂಪನ್‌ಗಳ ಮೂಲಕ ವಿತರಿಸಲಾಗಿದೆ. ಕೊರೊನಾ ವಾರಿಯರ್‌ಗಳು ಹಾಗೂ ವಿಕಲಚೇತನರಿಗೆ ಮಾರ್ಗಸೂಚಿ ಅನ್ವಯ ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಬಸವರಾಜ್ ಅವರು, ಕಳೆದ ಮಾರ್ಚ್ 29ರಂದು ಮೊದಲ ಡೋಸ್ ಲಸಿಕೆ ಪಡೆದಿದ್ದೆ. ಈಗ ಆರನೇ ವಾರಕ್ಕೆ ಬಂದರೂ ಎರಡನೇ ಲಸಿಕೆ ಸಿಕ್ಕಿಲ್ಲ ಎಂದರು.

ಶಿವಾನಂದ್ ಅವರು ಮಾತನಾಡಿ, ಆನ್‌ಲೈನ್ ಮೂಲಕ ಲಸಿಕೆ ನೋಂದಣಿ ಮಾಡಿಸಿಕೊಳ್ಳಿ ಎಂದು ಹೇಳಲಾಗುತ್ತದೆ. ಆದರೆ, ಆ ಬಗ್ಗೆ ಸಮರ್ಪಕ ಮಾಹಿತಿ ಲಭ್ಯವಾಗುತ್ತಿಲ್ಲ ಎಂದರು. ಶನಿವಾರದಂದು ಜಿಲ್ಲೆಯಲ್ಲಿ ಒಟ್ಟಾರೆ 6,424 ಜನರಿಗೆ ಕೊರೊನಾ ಲಸಿಕೆ ನೀಡಲಾಗಿದೆ.

## ಕೋವಿಡ್ ಲಸಿಕೆ ರದ್ದು : ಕಾಂಗ್ರೆಸ್ ತರಾಟೆ

ಎರಡನೇ ಡೋಸ್‌ಗಾಗಿ ಲಸಿಕೆ ಬುಕ್ ಮಾಡಿದ್ದು ಹಾಗೂ 18 ವರ್ಷ ಮೀರಿದವರ ವರ್ಗದಲ್ಲಿ ಬುಕ್ ಮಾಡಿದ್ದನ್ನು ರದ್ದು ಮಾಡಿರುವ ಸಂದೇಶಗಳು ಬರುತ್ತಿವೆ ಎಂದು ರಾಜ್ಯ ಕಾಂಗ್ರೆಸ್ ಆಕ್ಷೇಪಿಸಿದೆ. ಬಿಜೆಪಿಯ ನೋಂದಣಿ ಅಭಿಯಾನ, ಲಸಿಕೆ ಉತ್ಸವ ಎನ್ನುವ ಮಹಾನಾಟಕಗಳು ನಿಂತು ಹೋಗಿವೆ. ಲಸಿಕೆ ನೀಡದ, ಆಕ್ಸಿಜನ್ ಕೊಡಲಾಗದ ಈ ಅಯೋಗ್ಯರದ್ದು ಡಬಲ್ ಇಂಜಿನ್ ಸರ್ಕಾರಗಳಂತೆ! ಎಂದು ಕಾಂಗ್ರೆಸ್ ಲೇವಡಿ ಮಾಡಿದೆ.

## ಕೊರೊನಾ : ಸುಪ್ರೀಂನಿಂದ 12 ಸದಸ್ಯರ ಕಾರ್ಯಪಡೆ

**(1ನೇ ಪುಟದಿಂದ)**

ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ನೆರವಾಗಲು ಸುಪ್ರೀಂ ಕೋರ್ಟ್ 12 ಸದಸ್ಯರ ರಾಷ್ಟ್ರೀಯ ಕಾರ್ಯಪಡೆಯನ್ನು ರಚಿಸಿದೆ. ಸಮಿತಿಯಲ್ಲಿ ಉನ್ನತ ವೈದ್ಯಕೀಯ ಪರಿಣಿತರಿದ್ದಾರೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎಂ.ಆರ್. ಷಾ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ಆದೇಶ ಹೊರಡಿಸಿದೆ. ಕೇಂದ್ರ ಸಂಪುಟ ಕಾರ್ಯದರ್ಶಿ ಈ ಸಮಿತಿಯ ಸಂಚಾಲಕರಾಗಿರಲಿದ್ದಾರೆ.

# ಕೊರೊನಾ ಸೋಂಕಿತರಿಗೆ ಫಂಗಲ್ ರೋಗದ ಕಾಟ

### ಗುಜರಾತ್, ಮಹಾರಾಷ್ಟ್ರಗಳಲ್ಲಿ ಹೆಚ್ಚುತ್ತಿರುವ ಸಮಸ್ಯೆ

ಅಹಮದಾಬಾದ್/ಮುಂಬೈ, ಮೇ 8 – ಕೊರೊನಾದಿಂದ ತೀವ್ರವಾಗಿ ಬಳಲಿ ಬದುಕುಳಿದ ಹಲವರಲ್ಲಿ ಮುಕೊರ್ಮೈಕೊಸಿಸ್ ಎಂಬ ತೀವ್ರ ಸ್ವರೂಪದ ಫಂಗಲ್ ಸೋಂಕು ಕಂಡು ಬರುತ್ತಿದೆ ಎಂದು ಮಹಾರಾಷ್ಟ್ರ ಹಾಗೂ ಗುಜರಾತ್ ಅಧಿಕಾರಿಗಳು ಹೇಳಿದ್ದಾರೆ.

ಗುಜರಾತ್‌ನ ಹಲವು ಭಾಗಗಳಿಂದ ಫಂಗಲ್ ಸೋಂಕಿತರು ಬರುತ್ತಿದ್ದಾರೆ. ಈಗಾಗಲೇ 50 ಜನ ಚಿಕಿತ್ಸೆ ಪಡೆದಿದ್ದು, ಇನ್ನೂ 60 ಜನ ಚಿಕಿತ್ಸೆಗಾಗಿ ಕಾಯುತ್ತಿದ್ದಾರೆ ಎಂದು ಸೂರತ್‌ನ ಕಿರಣ್ ಸೂಪರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಅಧ್ಯಕ್ಷ ಮಾಥುರ್ ಸವಣಿ ತಿಳಿಸಿದ್ದಾರೆ. ಸೋಂಕಿನಿಂದಾಗಿ ಏಳು ಜನ ಕಣ್ಣುಗಳನ್ನು ಕಳೆದುಕೊಂಡಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಸೂರತ್‌ನ ಸಾರ್ವಜನಿಕ ಆಸ್ಪತ್ರೆಯಲ್ಲಿ ಇಂತಹ ರೋಗಿಗಳಿಗಾಗಿ ಚಿಕಿತ್ಸಾ ಸೌಲಭ್ಯ ಆರಂಭಿಸಲಾಗಿದೆ ಎಂದು ಅಲ್ಲಿನ ನಿವಾಸಿ ವೈದ್ಯಕೀಯ ಅಧಿಕಾರಿ ಡಾ. ಕೇತನ್ ನಾಯಕ್ ಹೇಳಿದ್ದಾರೆ. ಪ್ರತಿದಿನ ಕನಿಷ್ಠ ಐವರು ಮುಕೊರ್ಮೈ ಕೊಸಿಸ್ ರೋಗಿಗಳು ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದಾರೆ ಎಂದು ಅಹಮದಾಬಾದ್‌ನ ಅಸರ್ವ ಸರ್ಕಾರಿ ಆಸ್ಪತ್ರೆಯ ಹಿರಿಯ ವೈದ್ಯ ಡಾ. ದೇವಾಂಗ್ ಗುಪ್ತ ತಿಳಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಅದೇ ಸೋಂಕಿನ ಕಾರಣದಿಂದಾಗಿ ಕನಿಷ್ಠ ಎಂಟು ಜನ ಕಣ್ಣು ಕಳೆದುಕೊಂಡಿದ್ದಾರೆ. ಇತರೆ 200 ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸರ್ಕಾರಿ ವೈದ್ಯಕೀಯ ಶಿಕ್ಷಣ ಹಾಗೂ ಸಂಶೋಧನಾ ನಿರ್ದೇಶನಾಲಯದ ಮುಖ್ಯಸ್ಥ ಡಾ. ತತ್ಯರಾವ್ ಲಹಾನೆ ಹೇಳಿದ್ದಾರೆ.

ಕೊರೊನಾ ರೋಗಿಗಳಿಗೆ ಚಿಕಿತ್ಸೆ ನೀಡಲು ಸ್ಟಿರಾಯ್ಡ್ ಬಳಸುತ್ತಾರೆ. ಇದು ಸಕ್ಕರೆ ಮಟ್ಟ ಹೆಚ್ಚಿಸುತ್ತದೆ. ಕೆಲ ಔಷಧಿಗಳು ರೋಗಿಗಳ ರೋಗ ನಿರೋಧಕತೆ ಕಡಿಮೆ ಮಾಡುತ್ತವೆ. ಇಂತಹ ಸಂದರ್ಭದಲ್ಲಿ ಫಂಗಲ್ ಸುಲಭವಾಗಿ ರೋಗಿಗಳಿಗೆ ತಗಲುತ್ತದೆ ಎಂದು ಡಾ. ಲಹಾನೆ ಹೇಳಿದ್ದಾರೆ.

ಬ್ಲಾಕ್ ಫಂಗಲ್ ಎಂದೂ ಕರೆಯಲಾಗುವ ಈ ಫಂಗಸ್ ವಾತಾವರಣದಲ್ಲಿರುತ್ತದೆ. ರೋಗ ನಿರೋಧಕತೆ ಕಡಿಮೆಯಾದಾಗ ಸೋಂಕು ಬರುತ್ತದೆ. ಸಹ ಅಸ್ವಸ್ಥತೆ ಇರುವವರಿಗೆ ಈ ಸೋಂಕು ಬರುವ ಸಾಧ್ಯತೆ ಹೆಚ್ಚಾಗಿರುತ್ತದೆ.

ತಲೆ ನೋವು, ಜ್ವರ, ಕಣ್ಣಿನ ಕೆಳಗೆ ನೋವು, ಮೂಗು ಕಟ್ಟುವುದು ಹಾಗೂ ದೃಷ್ಟಿ ಮಂದವಾಗುವುದು ಈ ರೋಗದ ಲಕ್ಷಣಗಳು ಎಂದು ಡಾ. ಲಹಾನೆ ತಿಳಿಸಿದ್ದಾರೆ.

ಈ ರೋಗದಿಂದ ಗುಣವಾಗಲು 21 ದಿನಗಳ ಕಾಲ ಚುಚ್ಚುಮದ್ದು ಪಡೆಯಬೇಕಾಗುತ್ತದೆ. ಈ ಚುಚ್ಚುಮದ್ದುಗಳ ವೆಚ್ಚ ಪ್ರತಿ ದಿನ ಸುಮಾರು 9 ಸಾವಿರ ರೂ.ಗಳು ಎಂದವರು ಹೇಳಿದ್ದಾರೆ. ಕಳೆದ ಎರಡು ವಾರಗಳಲ್ಲಿ ಪ್ರತಿದಿನ ಇಬ್ಬರು ಮೂವರು ಆಸ್ಪತ್ರೆಗೆ ಬರುತ್ತಿದ್ದಾರೆ. ಮುಂಬೈ ಹೊರ ಭಾಗದಿಂದ ಬರುವ ಹಲವರಿಗೆ ರೋಗದ ಚಿಕಿತ್ಸೆ ಭರಿಸುವ ಸಾಮರ್ಥ್ಯ ಇರುವುದಿಲ್ಲ ಎಂದು ಮುಂಬೈನ ಕೆ.ಇ.ಎಂ. ಸರ್ಕಾರಿ ಆಸ್ಪತ್ರೆಯ ಡಾ. ಹೀತಲ್ ಮರ್ಫತಿಯ ತಿಳಿಸಿದ್ದಾರೆ.

## ಕರ್ಫ್ಯೂ ನಿಯಮ ಉಲ್ಲಂಘಿಸಿದ ಅಂಗಡಿಗಳಿಗೆ ದಂಡದ ಬಿಸಿ

ದಾವಣಗೆರೆ, ಮೇ 8- ಇಂದು ಬೆಳಿಗ್ಗೆ ಕರ್ಫ್ಯೂ ನಿಯಮ ಉಲ್ಲಂಘಿಸಿ ಅಂಗಡಿ ತೆರೆದ ಬಟ್ಟೆ ಅಂಗಡಿ, ಬಂಗಾರ ಹಾಗೂ ಇತರೆ ಅಂಗಡಿಗಳ ಮಾಲೀಕರಿಗೆ ದಂಡದ ಬಿಸಿ ತಟ್ಟಿದೆ.

ಸಿಪಿಐ ಗಜೇಂದ್ರಪ್ಪ ಹಾಗೂ ನಾಗಪ್ಪ ಅವರು ಕಾಳಿಕಾದೇವಿ ರಸ್ತೆಯಲ್ಲಿ ಬಟ್ಟೆ ಅಂಗಡಿ ದಾಳಿ ಮಾಡಿ, 6 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ. ಗಾಂಧಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಇನ್ನು ಮಂಡಿಪೇಟೆ ಕೆಜೆಪಿ ಜುವೆಲರ್ಸ್ ಬಂಗಾರದ ಅಂಗಡಿ ತೆರೆದ ಹಿನ್ನೆಲೆ ದಾಳಿ ಮಾಡಲಾಗಿದೆ. ಕೋವಿಡ್ ನಿಯಮ ಉಲ್ಲಂಘನೆ ಅಂಗಡಿ ತೆರೆದಿದ್ದರು. ಹೀಗಾಗಿ ಪೊಲೀಸರು ದಂಡ ವಿಧಿಸಿದ್ದಾರೆ.

ಚೌಕಿಪೇಟೆ, ಚಿಗಟೇರಿ ಗಲ್ಲಿ, ಕಾಯಿಪೇಟೆ, ವಿಜಯಲಕ್ಷ್ಮಿ ರಸ್ತೆಗಳಲ್ಲಿ ನಿಯಮ ಮೀರಿ ತೆರೆದ ಸ್ಟೇಷನರಿ, ಬಂಗಾರದ ಅಂಗಡಿ, ಬಟ್ಟೆ ಅಂಗಡಿಗಳ ಮೇಲೆ ನಗರ ಪಾಲಿಕೆ ಮತ್ತು ಪೊಲೀಸರು ದಾಳಿ ನಡೆಸಿ, ಒಟ್ಟು 25 ಸಾವಿರಕ್ಕೂ ಹೆಚ್ಚು ದಂಡ ವಿಧಿಸಲಾಗಿದೆ.

ಅನೇಕ ಅಂಗಡಿಗಳು ತಮ್ಮ ಅಂಗಡಿಗಳ ಮೇಲೆ ಮನೆ ಮಾಡಿಕೊಂಡು ವ್ಯಾಪಾರ ಮಾಡುತ್ತಿರುವುದು ಹೆಚ್ಚಾಗಿದೆ. ಮದುವೆ ಬಟ್ಟೆ ಇತರೆ ಶುಭ ಕಾರ್ಯಕ್ರಮಗಳಿಗೆ ಬಟ್ಟೆ ಖರೀದಿ ಮಾಡಲು ವಿವಿಧ ಕಡೆಯಿಂದ ಜನರು ಆಗಮಿಸಿದ್ದರು ಎನ್ನಲಾಗಿದೆ.

## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 08.05.2021ರಂದು ನಿಧನರಾದ
ದಾವಣಗೆರೆ ನಗರಸಭೆ ಮಾಜಿ ಅಧ್ಯಕ್ಷರೂ, ಹಿರಿಯ ಕಾರ್ಮಿಕ ಮುಖಂಡರೂ, ಕಮ್ಯೂನಿಸ್ಟ್ ಪಕ್ಷದ
ಹಿರಿಯ ನಾಯಕರೂ, ದಾವಣಗೆರೆ ಜಿಲ್ಲಾ ಎಐಟಿಯುಸಿ ಕಾರ್ಯದರ್ಶಿಗಳೂ ಆದ

**ಕಾಂ॥ ಹೆಚ್. ಕೆ. ರಾಮಚಂದ್ರಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ
ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ
ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಎಸ್.ಎಸ್. ಬಕ್ಕೇಶ್,** ಅಧ್ಯಕ್ಷರು **ಕೋಗುಂಡಿ ಬಕ್ಕೇಶಪ್ಪ,** ಕಾರ್ಯದರ್ಶಿ
**ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರುಗಳು**
**ದಾವಣಗೆರೆ ಜಿಲ್ಲಾ ಅಕ್ಕಿ ಗಿರಣಿ ಮಾಲೀಕರ ಸಂಘ, ದಾವಣಗೆರೆ.**



## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 08.05.2021ರಂದು ಅಕಾಲಿಕವಾಗಿ ನಿಧನರಾದ
ದಾವಣಗೆರೆ ನಗರಸಭೆ ಮಾಜಿ ಅಧ್ಯಕ್ಷರೂ,
ಹಿರಿಯ ಕಾರ್ಮಿಕ ಮುಖಂಡರೂ, ಕಮ್ಯೂನಿಸ್ಟ್ ಪಕ್ಷದ ಹಿರಿಯ ನಾಯಕರೂ ಆದ

**ಕಾಂ॥ ಹೆಚ್. ಕೆ. ರಾಮಚಂದ್ರಪ್ಪ**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ
ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಆವರಗೆರೆ ಜಿ. ಸುರೇಶ್**

ಮಾಜಿ ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ
ಮಹಾನಗರ ಪಾಲಿಕೆ, ದಾವಣಗೆರೆ.
ಮಾಜಿ ಅಧ್ಯಕ್ಷರು, ಟಿಪಿಸಿಎಂಎಸ್, ದಾವಣಗೆರೆ.
ಗೌಡ್ರು ವಂಶಸ್ಥರು ಹಾಗೂ ಆವರಗೆರೆ ಗ್ರಾಮಸ್ಥರು.

## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 08.05.2021ರಂದು ನಿಧನರಾದ
ದಾವಣಗೆರೆ ನಗರಸಭೆ ಮಾಜಿ ಅಧ್ಯಕ್ಷರೂ,
ಹಿರಿಯ ಕಾರ್ಮಿಕ ಮುಖಂಡರೂ,
ಕಮ್ಯೂನಿಸ್ಟ್ ಪಕ್ಷದ ಹಿರಿಯ ನಾಯಕರೂ,
ದಾವಣಗೆರೆ ಜಿಲ್ಲಾ ಎಐಟಿಯುಸಿ ಕಾರ್ಯದರ್ಶಿಗಳೂ,
ನಮ್ಮ ಪೂಜ್ಯ ತಂದೆಯವರಾದ
**ದಿ॥ ಶ್ರೀ ಆರ್.ಎಲ್. ಹನುಮಂತಪ್ಪ**
ಅವರ ಆತ್ಮೀಯ ಸ್ನೇಹಿತರೂ ಮತ್ತು
ನಮ್ಮ ಕುಟುಂಬ ಒಡನಾಡಿಗಳೂ ಆಗಿದ್ದ

**ಕಾಂ॥ ಹೆಚ್. ಕೆ. ರಾಮಚಂದ್ರಪ್ಪ**


ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ
ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು
ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.



- ಶ್ರೀಮತಿ ರತ್ನಮ್ಮ ಆರ್.ಎಲ್. ಹನುಮಂತಪ್ಪ
- ಶ್ರೀಮತಿ ಮತ್ತು ಆರ್.ಹೆಚ್. ನಾಗಭೂಷಣ್
  ಮಾಜಿ ಅಧ್ಯಕ್ಷರು, ನಗರಸಭೆ, ದಾವಣಗೆರೆ ಹಾಗೂ ಮಕ್ಕಳು
- ಶ್ರೀಮತಿ ಮತ್ತು ಆರ್.ಹೆಚ್. ಶಿವಕುಮಾರ್ ಹಾಗೂ ಮಕ್ಕಳು
- ಶ್ರೀಮತಿ ಮತ್ತು ಆರ್.ಹೆಚ್. ರಾಜೇಂದ್ರಕುಮಾರ್
  ಹಾಗೂ ಮಕ್ಕಳು
- ಆರ್.ಎಲ್. ಉಮಾಪತಿ
- ಆರ್.ಎಲ್. ಸೋಮಣ್ಣ
- ಆರ್. ಎಲ್. ಪ್ರಸಾದ್
- ಆರ್.ಎಲ್. ಶ್ರೀನಿವಾಸ್
- ಆರ್.ಎಲ್. ಲೋಕೇಶ್
- ಆರ್.ಎಲ್. ಚಂದ್ರಶೇಖರ್

ಮತ್ತು ಕುಟುಂಬ ವರ್ಗದವರು

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 08.05.2021ರಂದು ಅಕಾಲಿಕವಾಗಿ ನಿಧನರಾದ
ದಾವಣಗೆರೆ ನಗರಸಭೆ ಮಾಜಿ ಅಧ್ಯಕ್ಷರೂ,
ಹಿರಿಯ ಕಾರ್ಮಿಕ ಮುಖಂಡರೂ, ಕಮ್ಯೂನಿಸ್ಟ್ ಪಕ್ಷದ ಹಿರಿಯ ನಾಯಕರೂ ಆದ

**ಕಾಂ॥ ಹೆಚ್. ಕೆ. ರಾಮಚಂದ್ರಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ
ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು
ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಆಡಳಿತ ಮಂಡಳಿ**
**ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ.)**
**ಶ್ರೀ ಸಿದ್ಧಲಿಂಗೇಶ್ವರ ನಗರ, ದಾವಣಗೆರೆ.**


## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 08.05.2021ರಂದು ನಿಧನರಾದ
ದಾವಣಗೆರೆ ನಗರಸಭೆ ಮಾಜಿ ಅಧ್ಯಕ್ಷರೂ, ಹಿರಿಯ ಕಾರ್ಮಿಕ ಮುಖಂಡರೂ,
ಕಮ್ಯೂನಿಸ್ಟ್ ಪಕ್ಷದ ಹಿರಿಯ ನಾಯಕರೂ, ದಾವಣಗೆರೆ ಜಿಲ್ಲಾ ಎಐಟಿಯುಸಿ ಕಾರ್ಯದರ್ಶಿಗಳೂ,
ನಮ್ಮ ಶ್ರೇಯೋಭಿವೃದ್ಧಿಗೆ ಮಾರ್ಗದರ್ಶನ ನೀಡುತ್ತಿದ್ದ, ನಮ್ಮ ಹಿರಿಯ ಅಣ್ಣನ ಸಮಾನರೂ ಆಗಿದ್ದ

**ಕಾಂ॥ ಹೆಚ್. ಕೆ. ರಾಮಚಂದ್ರಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ
ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು
ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

- **ಎಸ್.ವಿ. ರಾಮಚಂದ್ರ,** ಶಾಸಕರು, ಜಗಳೂರು
- **ಟಿ.ಎನ್. ರಾಜಶೇಖರ್ ಮತ್ತು ಸಹೋದರರು,** ದೊಡ್ಡಬಾತಿ
- **ಶ್ರೀನಿವಾಸ್ ದಾಸಕರಿಯಪ್ಪ,** ಜಿಲ್ಲಾ ಉಪಾಧ್ಯಕ್ಷರು, ಬಿಜೆಪಿ ದಾವಣಗೆರೆ.
- **ಫಣಿಯಾಪುರ ಲಿಂಗರಾಜ್**
  **ಮತ್ತು ಕೆಂಚನಗೌಡ್ರು ಬಾಳೆನೆಲ್ಲಿ ಸಹೋದರರು**
  **ಹಾಗೂ ಬಂಧು-ಮಿತ್ರರು.**



JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte